
ದಲಿತ ಕವಿಯ ಸಸ್ಪೆಂಡ್: ಸಾಹಿತಿಗಳ ಎದೆಗೆ ಚೂರಿ!

'ಕೆಂಡದ ನಡುವೆ' ಪುಸ್ತಕ (ಕವನ ಸಂಕಲನ)ವು ಕಣ್ಣಿಗೆ ರಾಚಿಸುವ ನಿಜವಾದ ಕಾರಣಕ್ಕಾಗಿ ದಲಿತ ಕವಿ ವಿ. ಮುನಿವೆಂಕಟಪ್ಪನವರು ತಮ್ಮ ಬಿಡಿಓ (ಸಿದ್ಧಾಪುರ, ಉ. ಕ. ಜಿಲ್ಲೆ) ಕೆಲಸದಿಂದ ಸಸ್ಪೆಂಡ್ ಆಗಿರುವರು. ನಿಜವನ್ನು ಸಹಿಸದ ಹಾದರಗಿತ್ತಿ ಸರ್ಕಾರ ಮುನಿವೆಂಕಟಪ್ಪನವರ ಸಸ್ಪೆಂಡಿಗೆ ಬೇರೆ ಕಾರಣ ಕೊಡಲು ಹವಣಿಸುತ್ತಿದ್ದರೂ, ಮುನಿವೆಂಕಟಪ್ಪನವರು ದಲಿತರ ನೋವಿಗೆ ದನಿಯಾದದ್ದೇ, ಕಾವ್ಯದ ಮೂಲಕ ಪ್ರತಿಭಟಿಸಿದ್ದೇ, ಇವರ ಸಸ್ಪೆಂಡಿಗೆ ಮೂಲ ಕಾರಣವಾಗಿದೆ.

ನಿಜ ಹೇಳಲೆತ್ನಿಸುವ ಪತ್ರಿಕೆಗಳ ಕತ್ತಿಗೆ ಈಗಾಗಲೇ ಕತ್ತರಿ ಹಾಕಿ ನಗಾಡುತ್ತಿರುವ ಕುರುಡು ಕತ್ತರಿ ಸರ್ಕಾರ ಈ ಮುನಿವೆಂಕಟಪ್ಪನವರ 'ಕೆಂಡದ ನಡುವೆ' ಪ್ರಕರಣದ ಮೂಲಕ 'ಸತ್ಯ ನುಡಿಯಲೆತ್ನಿಸುವ ಸಾಹಿತ್ಯದ ಎದೆಗೆ ಚೂರಿ ಇರಿದು ಸಾಹಿತಿಗಳ ಸ್ವಾಭಿಮಾನವನ್ನು ಮೂಸಿನೋಡ ತೊಡಗಿದೆ.



ಇಂಥ ಕುರುಡು ಸರ್ಕಾರಕ್ಕೆ ಈಗ ನಾವು—ದಲಿತರು, ಪ್ರಜ್ಞಾವಂತರು, ಪ್ರಗತಿಪರರು, ಕವಿ ಕಲಾವಿಧ ಸಾಹಿತಿಗಳು—ಪ್ರತಿಭಟಿಸಿ ಬುದ್ಧಿ ಕಲಿಸಬೇಕಾಗಿದೆ. ಸರ್ಕಾರದ ಕೆಂಗಣ್ಣಿಗೆ ಗುರಿಯಾಗಿರುವ ಮುನಿವೆಂಕಟಪ್ಪನವರ 'ಕೆಂಡದ ನಡುವೆ' ಹಾಡುಗಳನ್ನು ಹಾಡುತ್ತ, ನಿಜ ತಿಳಿಸುತ್ತಾ ಮುಂದಿನ ಚುನಾವಣೆ ಸಮಯಕ್ಕೆ, ಕಣ್ಣು ಮುಚ್ಚಿರುವ ಸರ್ಕಾರದ ಕಣ್ಣು ತೆರೆಸಲು ರಡಿಯಾಗಬೇಕಾಗಿದೆ. ಇದಕ್ಕಾಗಿ ಕಣ್ಬಿಟ್ಟು ನೋಡಿರಿ ಎಂದು ಬಂಡಾಯ ಸಾಹಿತ್ಯ ಸಂಘಟನೆ, ದಲಿತ ಸಂಘರ್ಷ ಸಮಿತಿ, ಪಿ. ಯು. ಸಿ. ಎಲ್. ಇತ್ಯಾದಿ ಎಲ್ಲಾ ಪ್ರಗತಿಪರ ಸಂಘಟನೆಗಳಿಗೆ ಮತ್ತು ಎಲ್ಲಾ ಪ್ರಜ್ಞಾವಂತರಿಗೆ. 'ಪಂಚಮ' ವಿನಂತಿಸುತ್ತದೆ.

—ಸಂಪಾದಕ

ಕೆಂಡದ ನಡವೆ: ದಲಿತಲೇಖಕ ಕಲಾವಿಧರ ಸಭೆ

ದಲಿತ ಕವಿ ವಿ. ಮುನಿವೆಂಕಟಪ್ಪನವರನ್ನು ಕೆಲಸದಿಂದ ಸಸ್ಪೆಂಡ್ ಮಾಡಿರುವ ಸರ್ಕಾರದ ಕ್ರಮ, ದಲಿತ ಲೇಖಕ ಕಲಾವಿಧರಲ್ಲಿ ತೀವ್ರ ಆತಂಕವನ್ನುಂಟು ಮಾಡಿದೆ. ಇದನ್ನು ಉಗ್ರವಾಗಿ ಖಂಡಿಸಿರುವ ಕರ್ನಾಟಕದ ದಲಿತ ಲೇಖಕ ಕಲಾವಿದರು ಅಕ್ಟೋಬರ್ ಮೊದಲ ವಾರದಲ್ಲಿ ಶಿವಮೊಗ್ಗಾ ಜಿಲ್ಲೆಯಲ್ಲಿ ಸಭೆ ಸೇರಲಿದ್ದಾರೆ. 'ಕೆಂಡದ ನಡುವೆ' ಪ್ರಕರಣಕ್ಕೆ ಸಂಬಂಧ ಪಟ್ಟಂತೆ ತೀವ್ರ ಕಾರ್ಯಕ್ರಮಗಳನ್ನು ರೂಪಿಸುವ ನಿರೀಕ್ಷೆ ಇದೆ.

ಪಂಚಮ

ಸಂಪುಟ : 6 ಸಂಚಿಕೆ : 17 ಬೆಲೆ : 50 ಪೈಸೆ ಸೆಪ್ಟಂಬರ್ 20, 1982

ಮಹಾರಾಷ್ಟ್ರವನ್ನು ನಡುಗಿಸಿರುವ "ರಾವಣ ಬಿರುಗಾಳಿ"

ಮುಂಬಯಿಯ 'ನವಮಾಂತರ್ ನಿರ್ಧಾರ್ ಪರಿಷದ್'ನಲ್ಲಿ ಆಗಸ್ಟ್ ಹದಿನೈದರಂದು ತನ್ನ ಅಧಿಕೃತ ಬಿಡುಗಡೆಯನ್ನು ಪಡೆಯಬೇಕಾಗಿದ್ದ ದಲಿತ ಸಾಹಿತಿ ಅರುಣ ಕಾಂಬ್ಳೆಯವರ 'ರಾಮಾಯಣದಲ್ಲಿ ಸಾಂಸ್ಕೃತಿಕ ಘರ್ಷಣೆ' (ರಾಮಾಯಣತಿಲ್ ಸಂಸ್ಕೃತಿ ಸಂಘರ್ಷ) ಎಂಬ ಕೃತಿ, ಅದಕ್ಕಿಂತ ಮುಂಚೆಯೇ ತೀವ್ರತರವಾದ ಕೋಪೋದ್ರಿಕ್ತಸ್ಥಿತಿಯನ್ನು ಉಂಟುಮಾಡಿತು. ಸ್ವತಂತ್ರ ನಿರ್ಭೀತ ಪತ್ರಿಕೆಗಳ ಗುಂಪಿಗೆ ಸೇರಿದ ಮರಾಠಿ ದಿನಪತ್ರಿಕೆಯಾದ 'ನವಶಕ್ತಿ'ಯು ಮೇ ತಿಂಗಳ 2 ಮತ್ತು 9ನೇ ತಾರೀಕಿನ ತನ್ನ ಭಾನುವಾರದ ವಿಶೇಷ ಪುರವಣಿಯಲ್ಲಿ ಈ ಕೃತಿಯಿಂದ ಆಯ್ದ ಭಾಗಗಳನ್ನು ಪ್ರಕಟಿಸಿತು. ಆದರ ಮುಂದಿನ ವಾರದಲ್ಲೇ ಕರ್ತಾರ್ ಸಿಂಗ್ ಥಟ್ಟೆ ಎಂಬ ಹಿಂದೂ ರಾಜ್ಯ ಪರಿಷದ್‌ನ ಸ್ಥಾಪಕ ಸದಸ್ಯ, ಸಂಪ್ರದಾಯವಾದಿ ಹಿಂದೂವೊಬ್ಬ 'ನವಶಕ್ತಿ'ಯ ಕಛೇರಿಯಲ್ಲಿ ಪ್ರತ್ಯಕ್ಷನಾಗಿ, ತನ್ನ ಮಾಮೂಲಿ ಭಾವಾವೇಶದ ಸ್ಥಿತಿಯಲ್ಲಿ ಪತ್ರಿಕೆಯ ಸಂಪಾದಕ ಪಿ. ಆರ್. ಬೆಹರೆ ಹಾಗೂ ಲೇಖಕ ಅರುಣ ಕಾಂಬ್ಳೆ ಇಬ್ಬರನ್ನೂ ಕೊಲ್ಲುವುದಾಗಿ ಬೆದರಿಕೆ ಹಾಕಿದ. ಅದೃಷ್ಟವಶಾತ್, ಆತ ಎರಡು ಭಾರಿ ಪತ್ರಿಕಾಲಯಕ್ಕೆ ಭೇಟಿಕೊಟ್ಟಾಗಲೂ ಪತ್ರಿಕೆ ಸಂಪಾದಕ ಬೆಹರೆ ಅಲ್ಲಿರಲಿಲ್ಲ.

ಅನಂತರ ಕೋಪರ್‌ಗಾಂವಕರ್ ಬುವಾ ಎಂಬ ಕೀರ್ತನಕಾರನೊಬ್ಬ ಒಂದು ಪತ್ರಿಕಾಗೋಷ್ಠಿಯನ್ನು ಕರೆದು ಅರುಣಕಾಂಬ್ಳೆಯವರನ್ನು ಕ್ರಿಮಿನಲ್ ಆರೋಪಗಳ ಮೇಲೆ ಬಂಧಿಸಬೇಕೆಂಬ ಬೇಡಿಕೆಯನ್ನು ಮುಂದಿಟ್ಟ. ಅಲ್ಲದೆ, ಬೆಹರೆ ಮತ್ತು ಕಾಂಬ್ಳೆಯವರ ವಿರುದ್ಧ ಮಹಾರಾಷ್ಟ್ರದಾದ್ಯಂತ ಭಾಷಣ ಸಭೆಗಳನ್ನು ಏರ್ಪಡಿಸುವ ಯೋಜನೆಯನ್ನು ರೂಪಿಸಲಾಯಿತು.

ಕಾಂಬ್ಳೆಯವರು ತಮ್ಮ ಕೃತಿಯಲ್ಲಿ ಚರ್ಚಿಸಿರುವ ಪ್ರಧಾನ ಅಂಶಗಳೆಂದರೆ: ರಾಮ ಮತ್ತು ರಾವಣರ ನಡುವಿನ ಹೋರಾಟವನ್ನು ಹಿಂದೂ ಮತ್ತು ಬೌದ್ಧ ಸಂಸ್ಕೃತಿಯ ನಡುವಿನ ಹೋರಾಟವಾಗಿ. ಇವುಗಳಲ್ಲಿ ಮೊದಲನೆಯದು ದಲಿತರ, ಆದಿವಾಸಿಗಳ, ಮಹಿಳೆಯರ ಯಾವುದೇ ಹಕ್ಕುಗಳನ್ನು ನಿರಾಕರಿಸಿದರೆ, ಎರಡನೆಯದು ಇವರೆಲ್ಲರೂ ಸಮಾಜದಲ್ಲಿ ಸಮಾನರೆಂದು' ಗೌರವಿಸುತ್ತದೆ. ಈ ವಾದಕ್ಕೆ ಲೇಖಕರು ವಿಭಿನ್ನ ಸಾಕ್ಷಾಧಾರಗಳನ್ನು ಒದಗಿಸಿದ್ದಾರೆ. ಅವುಗಳಲ್ಲಿ ಮಹಾಯಾನ ಬೌದ್ಧ ಪಂಥಕ್ಕೆ ಸೇರಿದ 'ಲಂಕಾವತಾರ ಸೂತ್ರ' ಕೃತಿಯು ಒಂದು. ಇದರಲ್ಲಿ ರಾವಣ

(10ನೇ ಪುಟಕ್ಕೆ)

ಪ್ರಿಂಟರ್ಸ್ ಪ್ರಕಾಶನದ ಎರಡನೇ ಪ್ರಕಟಣೆ

ಸಿದ್ದಲಿಂಗಯ್ಯ ಬರೆದ

ಅ ವ ತಾ ರ ಗ ಳು

ಈಗ ಬಿ ಡು ಗ ಡೆ ಯಾ ಗಿ ದೆ

ಬೆಲೆ : ರೂಪಾಯಿ ಏಳು

ದೇವರು ಮನುಷ್ಯರ ಮೈಮೇಲೆ ಬರುವುದು ಹಳ್ಳಿಗಳಲ್ಲಿ ಮೇಲಿಂದ ಮೇಲೆ ಕಾಣುವ ಘಟನೆ.

ಶ್ರೀ ಸಿದ್ಧಲಿಂಗಯ್ಯ ತಾವು ಕಂಡ ಇಂಥಾ ಘಟನೆಗಳನ್ನು ಈ ಪುಸ್ತಕದಲ್ಲಿ ಕಲೆ ಹಾಕಿದ್ದಾರೆ. ರಂಜನೀಯವಾದ ಈ ನಿರೂಪಣೆ ನಮ್ಮ ಜನರ ಜೀವನಕ್ರಮದ ಬಗ್ಗೆ ಹೊಸತಾಗಿ ಯೋಚಿಲೂ ಪ್ರೇರೇಪಿಸುತ್ತದೆ.

ಪ್ರಿಂಟರ್ಸ್ ಪ್ರಕಾಶನದ ಮೊದಲ ಪ್ರಕಟಣೆ

ಚಂದ್ರಶೇಖರ ಕಂಬಾರರ ಕಾದಂಬರಿ

ಸಿಂಗಾರೆವ್ವ ಮತ್ತು ಅರಮನೆ

ಈಗ ಪುನರ್ಮುದ್ರಣದ ಪ್ರತಿಗಳು ಸಿಗುತ್ತವೆ.

ಬಿಡುಗಡೆಯಾದ ಹದಿನೈದೇ ದಿನಗಳಲ್ಲಿ ಮೊದಲ ಮುದ್ರಣದ ಎಲ್ಲಾ ಪ್ರತಿಗಳೂ ಖರ್ಚಾದ ಪುಸ್ತಕ ಇದು.

ಬೆಲೆ : ರೂಪಾಯಿ ಒಂಬತ್ತು

ಪ್ರಿಂ ಟ ರ್ಸ್ ಪ್ರ ಕಾ ಶ ನ

16, ಮಹಾತ್ಮಾಗಾಂಧಿ ರಸ್ತೆ,
ಬೆಂಗಳೂರು-560 001

ಮಾಲೀಕರು : ದಿ ಪ್ರಿಂಟರ್ಸ್ (ಮೈಸೂರು) ಲಿಮಿಟೆಡ್.
ಬೆಂ ಗ ಳೂ ರು.

ದಲಿತರನ್ನು ಕಾಡುತ್ತಿರುವ ದರಖಾಸ್ತು "ಸ್ಟೇ ಭೂತ"

ಹೆಗ್ಗೂರು ಮೈಸೂರಿನ ಟಿ. ನರಸೀಪುರ ತಾಲ್ಲೂಕಿಗೆ ಸೇರಿದ ಒಂದು ಹಳ್ಳಿ. 1962 ರಲ್ಲಿ ಸರ್ಕಾರ ಭೂಹೀನ ಹರಿಜನರಿಗೆ ಭೂಮಿ ಹಂಚುವ ಕಾರ್ಯಕ್ರಮದಲ್ಲಿ ಒಟ್ಟು 46 ಕುಟುಂಬಗಳಿಗೆ ನೀರಾವರಿ ಭೂಮಿ ಹಂಚಿತು. ಈ ಹಂಚಿಕೆಯಲ್ಲಿ ಕೆಲವರಿಗೆ 16 ಗುಂಟೆಗಳು ಮತ್ತೆ ಕೆಲವರಿಗೆ 20 ಗುಂಟೆಗಳಷ್ಟು ಭೂಮಿ ದೊರಕಿತು. ಊರಿನ ಇತರ ಮೇಲ್ಜಾತಿ ರೈತರಿಗೆ ಹರಿಜನರು ಅಂದರೆ ಕೂಲಿಗಳಾಗಿ ಇರಬೇಕಾಗಿದ್ದವರು ನೆಲದ ಒಡೆಯರಾಗುವುದು ನುಂಗಲಾರದ ತುತ್ತಾಯಿತು. ಇದಕ್ಕಾಗಿ ಊರಿನ ಕೆಲವು ಗೌಡರು ಹಲವಾರು ರೀತಿಯ ಆಶೆ ಆಮಿಷಗಳನ್ನೊಡ್ಡಿ ಅತಿ ಕಡಿಮೆ ದುಡ್ಡಿಗೆ ಈ ದರಖಾಸ್ತು ಜಮೀನನ್ನು ಕ್ರಯ ಮಾಡಿಕೊಂಡರು. ಆದರೆ ಕರ್ನಾಟಕ ಸರ್ಕಾರದ ಕಾನೂನು ಹರಿಜನರ ಬೆನ್ನೆಲುಬಾಯಿತು. ಯಾಕೆಂದರೆ ದಿ ಕರ್ನಾಟಕ ಸೆಡ್ಯೂಲ್ಡ್ ಕ್ಯಾಸ್ಟ್ ಅಂಡ್ ಸೆಡ್ಯೂಲ್ಡ್ ಟ್ರೈಬ್ಸ್ (ಪ್ರೊಹಿಬಿಷನ್ ಆಫ್ ಟ್ರಾನ್ಸ್‌ಫರ್ ಆಫ್ ಸರ್ಟೆನ್ ಲ್ಯಾಂಡ್ಸ್) ಆ್ಯಕ್ಟ್ 1978ರ ಪ್ರಕಾರ ಸರ್ಕಾರ ಮಂಜೂರು ಮಾಡಿದ್ದ ಜಮೀನನ್ನು 10 ವರ್ಷಗಳೊಳಗೆ ಯಾರಿಗಾದರೂ ಪರಬಾರೆ ಮಾಡಿದ್ದರೆ ಅದು ಅನೂರ್ಜಿತವಾಗುತ್ತದೆ. ಅನ್ನುವ ಕಾನೂನಿನಡಿ ಪರಭಾರೆ ಮಾಡಿದ್ದ ಜಮೀನೆಲ್ಲ ವಾಪಸ್ಸು ಹರಿಜನರಿಗೆ ದೊರೆಯಿತು. ಬಡವರಿಗೆ ಅಷ್ಟೊಂದು ಉಪಕಾರಿ ಈ ಕಾನೂನು ಅಂತ ನೀವು ಮೂಗಿನ ಮೇಲೆ ಬೆರಳಿಡಬಹುದು. ಒಂದು ನಿಮಿಷ ತಡೆಯಿರಿ. ಕಾನೂನಿನಲ್ಲಿ ಬಡವರಿಗೆ ನ್ಯಾಯ ದೊರಕಿಸುವ ತಾಯ್ಗಂಡತನದ ಬಗ್ಗೆ ಬೆನ್ನೆಲುಬಾದ ಕಾನೂನು ಬೆನ್ನುಹುರಿಯನ್ನು ಕತ್ತರಿಸಿ ಹಾಕುವುದರ ಬಗ್ಗೆ ಹೆಗ್ಗೂರು ಹರಿಜನರ ಭೂ ಸಮಸ್ಯೆ ಒಂದು ಜೀವಂತ ಉದಾಹರಣೆಯಾಗುತ್ತದೆ. ಈ ಭೂಮಿಯನ್ನು ಲಪಟಾಯಿಸಿಕೊಂಡ ಕೆಲವರು ಆಸ್ತಿ ಹಕ್ಕಿನ ಕಾನೂನಿನಡಿ ಹೈಕೋರ್ಟಿನಿಂದ "ಸ್ಟೇ" ತಂದರು. ಒಂದು ಕೈ ಬಾಯಿಗೆ ತುತ್ತು ಹಾಕಿದರೆ ಇನ್ನೊಂದು ಕೈ ಗಂಟಲಿಗಿಳಿಯದಂತೆ ಕತ್ತು ಹಿಸುಕಿ ಹಿಡಿಯಿತು. ಹೀಗೆ ನುಂಗಲಾರದ ತುತ್ತಾದ ಭೂಮಿಯನ್ನು ಹೆಗ್ಗೂರು ಹರಿಜನರು ತಮ್ಮದಾಗಿಸಿಕೊಳ್ಳುವ ಸಹಾಸದಲ್ಲಿ ಮುಂದುವರೆದಿದ್ದಾರೆ.

ಅಂಕನಹಳ್ಳಿ ಬೋರೇಗೌಡ ಅನ್ನುವ ಒಬ್ಬನೇ ಆಸಾಮಿ ಈ ಊರಿನ 21 ಕುಟುಂಬಗಳ ದರಖಾಸ್ತು ಜಮೀನನ್ನು ಪರಭಾರೆ ಮಾಡಿಕೊಂಡಿದ್ದಾನೆ. ಜಮೀನುದಾರರು ಒಟ್ಟು 5 ಕುಟುಂಬಗಳ ಜಮೀನಿಗೆ "ಸ್ಟೇ" ತಂದು, ಈ ಆಧಾರದ ಮೇಲೆ ಉಳಿದವರಿಗೂ "ಸ್ಟೇಭೂತ"ದ ಹೆದರಿಕೆ ಹುಟ್ಟಿಸಿ ಯಾರೂ ಜಮೀನಿನ ಹತ್ತಿರ ಕಾಲಿಡದಂತೆ ಮಾಡಿದ್ದಾರೆ. "ಸ್ಟೇ ಬಾರದ ಹರಿಜನರಿಗೆ ನೀವು ರಕ್ಷಣೆ ಕೊಟ್ಟು ಭೂಮಿ ಉಳುವಂತೆ ಅವಕಾಶ ಮಾಡಿಕೊಡಿ" ಎಂದು ಸಂಬಂಧಪಟ್ಟ ಪೋಲೀಸ್ ಇನ್ಸ್‌ಪೆಕ್ಟರ್ ಕೇಳಿದರೆ "ಇಂಥ ಸಂದಿಗ್ಧ ಕಾನೂನಿರುವಾಗ ನಾನು ಯಾರ ತಂಟೆಗೂ ಹೋಗುವುದಿಲ್ಲ" ಎಂದರು. ಆದರೆ ಇದೇ ವ್ಯಕ್ತಿ ಕೆಲವು ಹರಿಜನರಿಗೆ 'ನೀವು ಜಮೀನಿನ ಹತ್ತಿರ ಹೋಗಬೇಡಿ' ಅಂತ ಹೇಳಿ ಪೋಲೀಸು ದರ್ಪ ತೋರಿದ್ದರ ಬಗ್ಗೆ ಹೆಗ್ಗೂರಿನ ಹರಿಜನರು ಮೈಸೂರಿನ ದಲಿತ ಸಂಘರ್ಷ ಸಮಿತಿಗೆ ದೂರಿಕೊಂಡಿದ್ದರು.

ಹೀಗೆ ಜಮೀನು ಕೊಟ್ಟಿದ್ದೇವೆ ಅಂತ ಆಸೆ ಹುಟ್ಟಿಸಿದ ಸರ್ಕಾರ, ಶ್ರೀಮಂತ ಭೂಮಾಲಿಕರು, ಪೋಲೀಸರು— ಇವರೆಲ್ಲರ ಕಾಲಿನಡಿಯಲ್ಲಿ ಕರ್ನಾಟಕದ ಸಾವಿರಾರು ಹರಿಜನ ಕುಟುಂಬಗಳು ದಿಕ್ಕುಗಾಣದೆ ಕಂಗಾಲಾಗಿವೆ. **ದಲಿತ ಸಂಘರ್ಷ ಸಮಿತಿ** ಹಳ್ಳಿಹಳ್ಳಿಗಳಿಗೆ ಸುತ್ತಿ ಸಾವಿರಾರು ಇಂಥ "ಸ್ಟೇ" ಪ್ರಸಂಗಗಳನ್ನು ಪತ್ತೆಹಚ್ಚಿ ಸರ್ಕಾರದ ಕಣ್ಣಿಗಿಡಿದಿದ್ದರೂ ಸಹ ಸರ್ಕಾರ ಈ ಬಗ್ಗೆ ಕಣ್ಣು ಬಿಡುವಂತೆ ಕಾಣುತ್ತಿಲ್ಲ.

—ಕ್ಷೀರಸಾಗರ

ಬೂಸ ಪ್ರಕರಣ: ನನ್ನ ಜೀವ ಉಳಿಸಿದ ಸುಳ್ಳು

1970 ರಿಂದ 1973 ರ ತನಕ ಸೂಳೆಯ ಸೆರಗಿನಂತಿದ್ದ ಬೆಂಗಳೂರು ವಿಶ್ವವಿದ್ಯಾನಿಲಯದ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ (ಆನರ್ಸ್) ವಿದ್ಯಾರ್ಥಿಯಾಗಿದ್ದೆ. ಆ ಅವಧಿಯಲ್ಲಿ ನಡೆದ ಕೆಲವು ಘಟನೆಗಳನ್ನು ನೆನೆಸಿಕೊಂಡರೆ ಈಗಲೂ ಗುಂಡಿಗೆ ನಡುಗಲಾರಂಭಿಸುತ್ತದೆ.

ಬೂಸ ಪ್ರಕರಣದ ಸಮಯ. ನಗರದಲ್ಲಿ ಎಲ್ಲೆಲ್ಲೂ ಹರಿಜನ ವಿದ್ಯಾರ್ಥಿಗಳಿಗೆ ಚಾಕು-ಚೂರಿ-ಬ್ಲೇಡು, ರೇಜರ್, ಸೈಕಲ್ ಚೈನಿನ ಹೊಡೆತ ಸವರ್ಣೀಯ ವಿದ್ಯಾರ್ಥಿಗಳಿಂದ ಬೀಳುತ್ತಿದ್ದವು. ಈ ಅಮಾನುಷ ಪ್ರಕರಣದಿಂದ ತತ್ತರಿಸಿದ್ದ ಹಲವು ವಿದ್ಯಾರ್ಥಿಗಳು ಬೆಂಗಳೂರು ನಗರವನ್ನು ಬಿಟ್ಟಿದ್ದರು. ಈ ಗಲಾಟೆ ಹೆಚ್ಚಾಗಿ ಸರ್ಕಾರಿ ಕಾಲೇಜಿನಲ್ಲಿ ನಡೆಯುತ್ತಿತ್ತು.

ಒಂದು ದಿನ ಸಂಜೆ 5 ರ ಸಮಯ. ಹಾಸ್ಟೆಲಿನಲ್ಲಿ ಹಣ ಕಟ್ಟದಿದ್ದಕ್ಕೆ ಇಡೀ ದಲಿತ ವಿದ್ಯಾರ್ಥಿಗಳಿಗೆ ಊಟ ನಿಲ್ಲಿಸಿದ್ದರು. ಹಸಿದು ಹಾಸಿಗೆ ಕಚ್ಚಿದ್ದ ನಾನು ಹೊರಗಡೆ ಹೋಗಲು ಸಿದ್ಧನಾಗುತ್ತಿದ್ದೆ. ಯಾರೋ ಬಾಗಿಲ ಬಡಿದ್ದ ಸದ್ದಾಯಿತು. ಬಾಗಿಲು ತೆಗೆದೆ ಸರ್ಕಾರಿ ಕಾಲೇಜಿನ ದಾಂಡಿಗ ಪಾಟೀಲ! 'ಏನಯ್ಯ ಬಂದೆ' ಎಂದ. ಅವನ ಹಿಂದೆ ಸಾಧಾರಣ ಮಟ್ಟದ ದಾಂಡಿಗರು ಇದ್ದರು. ಅವರೊಡನೆ ಸೆಂಟ್ರಲ್ ಕಾಲೇಜ್ ಆವರಣಕ್ಕೆ ಬಂದೆ. "ಒಂದು ಹಾಡು ಹೇಳೋ" ಎಂದರು. ಒಬ್ಬ ದಪ್ಪತುಟಿಯ ಹುಡುಗ ಜೇಬಿನಿಂದ ಭಂಗಿಸೊಪ್ಪು ತೆಗೆದ. ಮತ್ತೊಬ್ಬ ಮಣ್ಣಿನ ಚಿಮಣಿ ತೆಗೆದ ಓರ್ವ ಸೊಪ್ಪನ್ನು ಉಜ್ಜಿದ. ಇನ್ನೊಬ್ಬ ಅದನ್ನು

ಅನುಭವದ ಗಣಿಯಿಂದ

ನೀರಿನಿಂದ ನೆನೆಸಿದ. ನಂತರ ಒಂದೊಂದು 'ದಮ್' ಎಳೆದರು ನನಗೂ ಕೊಟ್ಟರು. ಹೀಗೆ ಕುಡಿದು ಅಮಲಿನಲ್ಲಿರುವಾಗ ಅದ್ಯಾವುದೊ ಒಂದು ಜನಪದಗೀತೆ ಅರಚಿದೆ. ಆಗ ನನ್ನ ಕೈಲಿ ಎರಡು ಪತ್ರಿಕೆ ಇದ್ದವು. ಒಂದು ದಲಿತಸಂಘರ್ಷ ಸಮಿತಿಯ 'ಶೋಷಿತ' ಎರಡನೆಯದು 'ಶೂದ್ರ'. ಪಾಟೀಲ ಅವನ್ನು ಕಿತ್ತುಕೊಂಡ 'ನಿಜ ಹೇಳು ನೀನು SC ಅಲ್ವ' ಎಂದು ಕೇಳಿದ. ಮತ್ತೊಬ್ಬ 'SC ಅಲ್ಲದೆ ಬೇರೆ ಅಲ್ವೆ ಅಲ್ಲ' ಅಂದ. 'ಲೇ SC ಹುಡುಗರು ಯಾರ್‍ಯಾರು ತೋರಿಸು' ಎಂದ. ಒಬ್ಬ 'ಹೇಳದಿದ್ದರೆ ನೀನು ಹಾಸ್ಟೆಲಿಗೆ ಹೋಗುವಂತಿಲ್ಲ' ಎಂದ ಪಾಟೀಲ. ಓರ್ವ ಸಿಗರೇಟು ತೆಗೆಯಲು ಜೇಬಿಗೆ ಕೈ ಹಾಕಿದ. ಕೈಲಿ ರೇಜರ್ ಇತ್ತು. ಅವರ ವರ್ತನೆ, ಪ್ರಶ್ನೆಗಳಿಂದ ನನ್ನ ತೊಳ್ಳೆ ನಡುಗಲಾರಂಭಿಸಿತ್ತು ತಕ್ಷಣ ಬುದ್ಧಿ ಓಡಿಸಿದೆ. 'ನಾನು ಗೌಡ SC ಅಲ್ಲ'ಎಂದು ಹೇಳಿದೆ. ಆಗ ಓರ್ವ ಕಪ್ಪು ಹುಡುಗ ನಾನು ಹೇಳಲಿಲ್ವೆ' 'ಕೆಂಪಯ್ಯ ಗೌಡರ ಹುಡುಗ ಅಂತ' ಎಂದು ನನ್ನ ಕೈಲಿದ್ದ ಪತ್ರಿಕೆಗಳ ವಶಪಡಿಸಿಕೊಂಡು ಸ್ವಲ್ಪ ದೂರದಲ್ಲಿ ಹೋದರು. ಲೈಬ್ರರಿಯಿಂದ ಬರುತ್ತಿದ್ದ ಕಪ್ಪನೆಯ ಲಿಂಗಾಯುತರ ಹುಡುಗನನ್ನು SC ಹುಡುಗ ಎಂದು ತಿಳಿದು ಹಲ್ಲೆ ನಡೆಸಿದರು ನಾನು ಅದನ್ನು ನೋಡಿಕೊಂಡು ಹಾಸ್ಟೆಲಿಗೆ ವಾಪಸ್ಸಾದೆ. ತಲೆ ಸಿಡಿಯುತ್ತಿತ್ತು.

* ಬಾನಂದೂರು ಕೆಂಪಯ್ಯ

ಶ್ರೀ ಪಿ. ವೆಂಕಟರಮಣರ ಸಮಾಜ ಕಲ್ಯಾಣ ವೈಖರಿ!

ನಂಜನಗೂಡಿನ ಜನರಲ್ ಕಾಲೇಜು ಹಾಸ್ಟಲಿನಲ್ಲಿ ದಲಿತ ವಿದ್ಯಾರ್ಥಿಗಳು ಜೈಲಿನ ಖೈದಿಗಳಿಗಿಂತಲೂ ಕೀಳುಮಟ್ಟದಲ್ಲಿ ಬದುಕುತ್ತಿದ್ದಾರೆ. ಇಲ್ಲಿ ಕೊಡುವ ಊಟ ನಾಯಿಗಳಿಗೆ ಹಾಕುವುದಕ್ಕಿಂತ ಕೀಳಾಗಿದ್ದು, ಡೈನಿಂಗ್‌ಹಾಲ್ ದನದ ಕೊಟ್ಟಿಗೆಗಿಂತ ಕೀಳಾಗಿದೆ. ಇಲ್ಲಿನ ಊಟ ತಿಂದ ಪ್ರತಿಯೊಬ್ಬ ವಿದ್ಯಾರ್ಥಿಯೂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುತ್ತಾನೆ. ಇಂಥ ಊಟ ಉಂಡು ಬದುಕುತ್ತಿರುವ ದಲಿತ ವಿದ್ಯಾರ್ಥಿಗಳು ಸಾಲದು ಎಂಬಂತೆ ಇಲ್ಲಿನ ಭೀಕರ ಸೊಳ್ಳೆ ತಿಗಣೆಗಳ ಹಾವಳಿಗೆ ಬಲಿಯಾಗಬೇಕಾಗಿದೆ.

ಇದು ನಮ್ಮ ಸಮಾಜ ಕಲ್ಯಾಣ ಮಂತ್ರಿಗಳಾದ ಶ್ರೀಮಾನ್ ಪಿ. ವೆಂಕಟರಮಣ ಅವರು ಸ್ವಂತವಾಗಿ ನಡೆಸುತ್ತಿರುವ ಹಾಸ್ಟಲಿನ ಕಥೆ! ಇದರ ವಾರ್ಡನ್ ವೆಂಕಟರಮಣರ ಸಂಬಂಧಿಕರು. ವಿದ್ಯಾರ್ಥಿಗಳಿಗೆಂದು ಪ್ರತಿ ತಿಂಗಳು ಬರುವ 150 ರೂ.ಗಳಲ್ಲಿ 60–70 ರೂ.ಗಳು ಮಾತ್ರ ಖರ್ಚಾಗುತಿದ್ದು, ತಿಂಗಳಿಗೆ ಸುಮಾರು 5000 ರೂಪಾಯಿಗಳನ್ನು ವಾರ್ಡನ್ ಸಾಹೇಬರು ಅರ್ಥಾತ್ ಶ್ರೀ ಪಿ. ವೆಂಕಟರಮಣರವರು 'ಗುಳುಂ' ಮಾಡುತ್ತಿದ್ದಾರೆ.

ತಾರೀಖು 19–9–82 ರಂದು ವಿನಾಕಾರಣ ಕೊಡುತ್ತಿದ್ದ ಆ ಕಚಡಾ ಊಟವನ್ನೂ ನಿಲ್ಲಿಸಿಬಿಟ್ಟಾಗ ಮಂತ್ರಿಗಳ ದರ್ಬಾರನ್ನು ಅವರ ಅವಿವೇಕವನ್ನು ದಲಿತ ಸಂಘರ್ಷ ಸಮಿತಿಯ ಯುವಕರು ಮತ್ತು ದಲಿತ ವಿದ್ಯಾರ್ಥಿ ಒಕ್ಕೂಟದ ನೊಂದ ವಿದ್ಯಾರ್ಥಿಗಳು ಕೂಡಿಕೊಂಡು ಪ್ರತಿಭಟಿಸಿದರು. ವೆಂಕಟರಮಣರ ಲೀಲೆಗಳ ಕುರಿತ ಬೀದಿ ಹಾಡುಗಳು, ಭಾಷಣಗಳು ನಂಜನಗೂಡಿನ ಬೀದಿ ಬೀದಿಗಳಲ್ಲಿ ಮೊಳಗಿದವು. ಹಾಸ್ಟಲಿನ ಕಚಡಾ ವ್ಯವಸ್ಥೆ ಈ ಕೂಡಲೆ ಬದಲಾಗಬೇಕೆಂದು ಒತ್ತಾಯಿಸಲಾಯಿತು. ನೊಂದ ವಿದ್ಯಾರ್ಥಿಗಳ ರೋಷಕ್ಕೆ ಬೆದರಿದ ಹಾಸ್ಟಲಿನ ವ್ಯವಸ್ಥಾಪಕರು "ಇನ್ನು ಮೇಲೆ ವ್ಯವಸ್ಥೆ ಸರಿಮಾಡುತ್ತೇವೆ" ಎಂದು ತಿಪ್ಪೆ ಸಾರಿಸಿದ್ದಾರೆ.

ಇದೆಲ್ಲಾ ನಡೆಯುತ್ತಿರುವ ಸಮಯದಲ್ಲೇ ಶ್ರೀಮಾನ್ ವೆಂಕಟರಮಣ ಅವರು ತಮ್ಮ ಕಾಂಗ್ರೆಸ್ ಪಕ್ಷದ ಇಪ್ಪತ್ತಂಶದ ಬಗ್ಗೆ ಭಾಷಣ ಕೊಚ್ಚುತ್ತಾ ಮೈಸೂರು ಜಿಲ್ಲೆಯನ್ನು ಟೂರು ಮಾಡುತ್ತಿದ್ದರೆಂದು ತಿಳಿದು ಬಂದಿದೆ.

—ವರದಯ್ಯ

ಸ್ವಭಿಮಾನ : ಹುಲ್ಲೆಮನೆ ದಲಿತರ ಮೇಲೆ ಹಲ್ಲೆ

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಹುಲ್ಲೆಮನೆ ದಲಿತರ ಮೇಲೆ ಹಲ್ಲೆನಡೆಸಲು ಹೇಳಿ ಮಾಡಿಸಿದಂತಿದೆ. ಏಪ್ರಿಲ್ ತಿಂಗಳಲ್ಲಿ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ಸಾಂಸ್ಕೃತಿಕ ಕಾರ್ಯಕ್ರಮ ಮಾಡುತ್ತಿದ್ದಾಗ ಅವರ ಮೇಲೆ ಹಲ್ಲೆ ನಡೆಸಿ, ಆ ಮೂಲಕ ಮೂಡಿಗೆರೆ ಸರ್ಕಲ್ ಇನ್ಸ್‌ಪೆಕ್ಟರ್ ಷರೀಫರ ಪ್ರಕರಣ ನಡೆದು ಪ್ರಸಿದ್ಧಿಗೆ ಬಂದ ಹುಲ್ಲೆಮನೆಯಲ್ಲಿ ಮತ್ತೊಮ್ಮೆ 23-8-82 ರಂದು ಸ್ಥಳೀಯ ಬಡ ದಲಿತರ ಮೇಲೆ ಮೇಲ್ಜಾತಿ ಹಣವಂತರಿಂದ ಹಲ್ಲೆ ನಡೆದಿದೆ. ಸತ್ತದನ ಎತ್ತಾಕುವುದು, ಸತ್ತ ಹೆಣಕ್ಕೆ ಗುಂಡಿ ತೆಗೆಯುವುದು, ಬೆಂಕಿ ಹಿಡಿಯುವುದು ಇತ್ಯಾದಿ ಕುಳುವಾಡಿಕೆ ಕೆಲಸಮಾಡಲು ದಲಿತರು ನಿರಾಕರಿಸಿ ಸ್ವಾಭಿಮಾನ ತೋರಿದ್ದೇ ಇವರ ಮೇಲಿನ ಹಲ್ಲೆಗೆ ಕಾರಣವಾಗಿದೆ.

ಹೆಸರಿಗೆ ತಕ್ಕ ಗ್ರಾಮ

ಹುಲ್ಲೆ ಮನೆ ಎಂದರೆ, ಅಧಿಕವಾಗಿ ಹುಲ್ಲಿನ ಮನೆಗಳು. 15 ಹರಿಜನರು 30 ಗೌಡರ ಮನೆಗಳು ಇವೆ. ದಟ್ಟಕಾಡಿನ ಮಧ್ಯ ಇರುವ ಈ ಕುಗ್ರಾಮ. ಸರಿಯಾದ ರಸ್ತೆಯಿಲ್ಲ, ವಿದ್ಯುತ್ ದೀಪವಿಲ್ಲ, ಶಾಲೆ, ಆಸ್ಪತ್ರೆ, ಇತ್ಯಾದಿ ನಾಗರೀಕ ಸೌಲಭ್ಯಗಳಿಂದ ವಂಚಿತಗೊಂಡಿದೆ. ಅಲ್ಲಲ್ಲಿ ಸ್ವಲ್ಪ ಭೂಮಿ ಸಾಗು ಮಾಡುವುದರ ಜೊತೆಗೆ ಕೂಲಿ ಕೆಲಸಮಾಡಿ ರಾತ್ರಿ–ಹಗಲು ಕಳೆಯುತ್ತಾ ಬದುಕುತ್ತಿದ್ದಾರೆ ಇಲ್ಲಿನ ಜನ. ಯಾವ ಅಧಿಕಾರಸ್ಥರಾಗಲಿ ಅತ್ತ ಸುಳಿದಾಡಿಲ್ಲ. ಹೀಗಾಗಿ ಅನಾಗರಿಕ ವ್ಯವಸ್ಥೆಯಲ್ಲಿ ಜೀವಿಸುತ್ತಿದ್ದಾರೆ.

ಓದುಗರಲ್ಲಿ ವಿನಂತಿ

ಪ್ರತಿಯೊಬ್ಬ ಚಂದಾದಾರರಿಗೂ ಪಂಚಮ ಪತ್ರಿಕೆಯನ್ನು ತಪ್ಪದೆ, ವಿಶೇಷ ಎಚ್ಚರಿಕೆಯಿಂದ ಅಂಚೆಗೆ ಹಾಕಲಾಗುತ್ತಿದೆ. ಇಷ್ಟಾಗಿಯೂ 'ಪಂಚಮ' ತಲುಪದಿದ್ದಲ್ಲಿ ನಿಮ್ಮ ಹತ್ತಿರದ ಅಂಚೆ ಕಛೇರಿಯಲ್ಲಿ ವಿಚಾರಿಸಿರಿ ; ನಮಗೊಂದು ಪತ್ರ ಹಾಕಿರಿ.

ಪಂಚಮ ಪ್ರತಿ 15 ದಿನಗಳಿಗೊಮ್ಮೆ ಪ್ರಕಟವಾಗುತ್ತದೆ ವಾರ್ಷಿಕ ಚಂದಾ : 10 ರೂಪಾಯಿಗಳು ಮಾತ್ರ. ಮನಿ ಆರ್ಡರ್ ಮೂಲಕ ಚಂದಾ ಕಳುಹಿಸಿರಿ.

ಲೇಖನ, ವರದಿ, ಸಣ್ಣಕಥೆ, ಕವನ, ಅನುಭವ, ವಿಮರ್ಶೆ, ಚಿಂತನೆ—ಯಾವುದಿದ್ದರೂ ಕಳುಹಿಸಿಕೊಡಿ.

—ವ್ಯವಸ್ಥಾಪಕರು 'ಪಂಚಮ' ಪಾಕ್ಷಿಕ,
2514–ಎ, ಕೆ. ಜಿ. ಕೊಪ್ಪಲು,
ಮೈಸೂರು–570 014

ಮನೆ ಧ್ವಂಸ : ಖಂಡನೆ

ಬೆಂಗಳೂರು : ಇತ್ತೀಚೆಗೆ ಹೊಸಕೋಟೆ ತಾಲ್ಲೂಕಿನ ಶೀಗೆಹಳ್ಳಿ ಗ್ರಾಮದ ದಲಿತರ ಮನೆಗಳಲ್ಲಿ ಸ್ಥಳೀಯ ಜಾತ್ಯಾಂಧರು ಧ್ವಂಸಮಾಡಿದ್ದನ್ನು ಬೆಂಗಳೂರು ದಲಿತ ಸಂಘರ್ಷ ಸಮಿತಿ ಖಂಡಿಸಿದೆ.

ಇಲ್ಲಿನ ದಲಿತರ ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನಿಸಿದ ಆರ್. ಮುನಿಯಪ್ಪ ಎಂಬುವವರನ್ನು ಕೊಲೆ ಮಾಡಲು ಸಂಚುಹಾಕಿ ಊರಿನವರೆಲ್ಲ 8–8–82ರ ರಾತ್ರಿ ಆತನ ಮನೆಗೆ ಮುತ್ತಿಗೆ ಹಾಕಿ ಧ್ವಂಸ ಮಾಡಿದರು. ಮರಣದಿಂದ ಪಾರಾದ ಮುನಿಯಪ್ಪನ ಸಂಸಾರ ಊರು ಬಿಟ್ಟಿದೆ.

ದಲಿತ ನೌಕರರ ಸಂಘ ಸ್ಥಾಪನೆ

ಧಾರವಾಡ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಹರಿಜನ ಗಿರಿಜನ ಸರಕಾರಿ ನೌಕರರ ಸಂಘ ಸ್ಥಾಪನೆಯಾಗಿದೆ. ಸಂಬಂಧಪಟ್ಟ ನೌಕರರು ಸಂಘದ ಅಧ್ಯಕ್ಷರಾದ ಶ್ರೀ ಎಸ್. ಎಂ. ತಳಕೇರಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಛೇರಿ, ಧಾರವಾಡ —ಇವರೊಂದಿಗೆ ಸಂಪರ್ಕವಿಟ್ಟುಕೊಳ್ಳಬೇಕೆಂದು ಕೋರಲಾಗಿದೆ.

ಅರ್ಜಿಗಳ ಮೇಲೆ ಕಣ್ಣೀರು ಸುರಿಸುವ ಗೇಣುದಾರರು

ಭೂ ಸುಧಾರಣ ಚರಿತ್ರೆ–3

ಕ್ಷೀರ ಸಾಗರ

ಭೂಸುಧಾರಣಾ ಕಾನೂನಿನ ಅಡಿಯಲ್ಲಿ ಬಹಳಷ್ಟು ಮಂದಿ ಅಶಕ್ತರು, ವಿಧವೆಯರು ತಮಗೆ ಇದ್ದ ಒಂದೇ ಒಂದು ಆಧಾರವಾದ ಜಮೀನನ್ನು ಕಳೆದುಕೊಂಡ ಮೇಲೆ ಬದುಕಿಗೆ ಬೇರೆ ದಾರಿ ಉಳಿಯದೆ ಅತಂತ್ರರಾಗ ಬೇಕಾದಂಥ ಸಾವಿರಾರು ಉದಾಹರಣೆಗಳಿವೆ. ಉಳುವವನೇ ಭೂಮಿಯ ಒಡೆಯ ಅನ್ನುವ ಕಾನೂನು ತರುವಾಗ ವಿಧವೆಯರು ಮತ್ತು ಅಶಕ್ತರು, ಸ್ವತಃ ದುಡಿಯಲು ಸಾಧ್ಯವಾಗುತ್ತದ ಅನ್ನುವುದನ್ನೂ ಯೋಚನೆ ಮಾಡದೆ ಕಾನೂನಿನ ಚೂರಿಯಲ್ಲಿ ಇವರ ಹೊಟ್ಟೆ ಇರಿದರು. ವಿಧವೆಯರು ಮತ್ತು ಅಶಕ್ತರು ಆಗಿರುವ ಕಾರಣಕ್ಕಾಗಿಯೇ ಜಮೀನನ್ನು ಉಳುವುದಕ್ಕೆ ಶಕ್ತರಾಗಿರುವ ರೈತರಿಗೆ ಗೇಣಿಗಾಗಿ ಕೊಟ್ಟಿರುತ್ತಾರೆ. ತೀರ ಸಣ್ಣ ಹಿಡುವಳಿಯನ್ನು ಹೊಂದಿರುವ ಬಡ ರೈತ ಶಕ್ತಿ ಇದ್ದರೂ ತಮ್ಮ ಜಮೀನನ್ನು ಮಧ್ಯಮ ರೈತರಿಗೆ ಗೇಣಿಗೆ ಕೊಟ್ಟಿರುತ್ತಾರೆ. ಕಾರಣ ಬಡ ರೈತರ ಬಳಿ ವ್ಯವಸಾಯ ಮಾಡಲು ಬೇಕಾಗಿರುವ ಎತ್ತು, ಗಾಡಿ ಮುಂತಾದ ಉಪಕರಣಗಳಿರುವುದಿಲ್ಲ. ಇದೆಲ್ಲ ಇರುವ ಮಧ್ಯಮ ರೈತನಿಗೆ ಗೇಣಿಗೆ ಕೊಡದೆ ಬೇರೆ ಏನುದಾರಿ ಉಳಿದಿದೆ? ಇಂಥ ಸಂದರ್ಭಗಳಲ್ಲೂ ಕೂಡ ನ್ಯಾಯ ಮಂಡಳಿಗಳು ನಿರ್ದಾಕ್ಷಿಣ್ಯವಾಗಿ ವಿಧವೆ, ಅಶಕ್ತರು ಮತ್ತು ಬಡ ರೈತರನ್ನು ಭೂಒಡೆತನದಿಂದ ವಂಚಿಸಿ ಮಧ್ಯಮ ಹಾಗೂ ಶ್ರೀಮಂತ ರೈತರಿಗೆ 'ಗೇಣಿದಾರರು' ಅನ್ನುವ ಒಂದೇ ಕಾರಣಕ್ಕಾಗಿ ಬಡವರಿಂದ ಭೂಮಿ ಕಿತ್ತು ಉಳ್ಳವರಿಗೆ ಕೊಟ್ಟಿದ್ದು ಭೂಸುಧಾರಣೆಯ ಒಂದು ವಿಪರ್ಯಾಸ. ಇದಕ್ಕೆ ಒಂದು ಉದಾಹರಣೆ ನೋಡಿ.

ಸುಮಾರು 70 ವರ್ಷ ಆಗಿರ ಬಹುದಾದ ಸುಕ್ಕುಗಟ್ಟಿ ಚಿಂತೆಯ ಗೆರೆ ಮೂಡಿದ ಅಜ್ಜಿಯೊಬ್ಬಳು ಅವಳ 30 ವರ್ಷ ವಯಸ್ಸಿನ ವಿಧವೆ ಸೊಸೆ ಅರ್ಜಿ ಹಿಡಿದು ಮೈಸೂರು ತಾಲ್ಲೂಕು ಭೂನ್ಯಾಯ ಮಂಡಳಿಯ ಹತ್ತಿರ ದಿಕ್ಕುಗಾಣದೆ ನಿಂತಿದ್ದರು. ವಿವರ ಇಷ್ಟು, ಸೊಸೆ ಹೇಳುವಂತೆ: ಮಾವನವರು ಚಾಮುಂಡಿ ಬೆಟ್ಟದ ಮೇಲಿನ ದೇವಸ್ಥಾನದ ಅರ್ಚಕರಾಗಿದ್ದದ್ದರಿಂದ 15 ಎಕರೆ ದೇವಸ್ಥಾನದ ಜಮೀನನ್ನು ಇವರಿಗೆ ಕೊಡಲಾಗಿತ್ತು. ಇವರು ಅರ್ಚಕ ವೃತ್ತಿ ಮಾಡುತ್ತಿದ್ದ ಕಾರಣಕ್ಕಾಗಿ ಕೊಟ್ಟ ತಳೂರಿನಲ್ಲಿರುವ ಜಮೀನನ್ನು ಇವರು ಸ್ವಂತ ವ್ಯವಸಾಯ ಮಾಡುವುದಾದರೂ ಹೇಗೆ. ಸ್ವಂತ ವ್ಯವಸಾಯ ಮಾಡಲು ಹೊರಟರೆ ಅರ್ಚಕ ವೃತ್ತಿ ಮಾಡಲಾಗುವುದಿಲ್ಲ. ಅರ್ಚಕ ವೃತ್ತಿ ಮಾಡಿದರೆ ಸ್ವಂತ ವ್ಯವಸಾಯ ಮಾಡಲಾಗುವುದಿಲ್ಲ ಹೀಗಾಗಿ ಈ ಜಮೀನನ್ನು ರೈತರಿಗೆ ಗೇಣಿಗೆ ಕೊಡಬೇಕಾಯಿತು. ಈಗ ಮಾವ ಅಳಿಯ ಇಬ್ಬರೂ ಸತ್ತಿದ್ದಾರೆ. ಈ ಇಬ್ಬರು ವಿಧವೆಯರಿಗೂ ಬೇರೆ ಯಾವುದೇ ಜೀವನಾಧಾರವಿಲ್ಲ ಭೂಮಿ ಕಳೆದುಕೊಂಡಿದ್ದಷ್ಟೇ ಅಲ್ಲದೆ ಅದಕ್ಕೆ ಸಿಕ್ಕ ಬೇಕಾಗಿರುವ ಪರಿಹಾರ ಕೂಡ ಇವರಿಗೆ ದಕ್ಕುವುದು ಕಷ್ಟವಾಗುತ್ತಿದೆ. ಕಾರಣವೇನೆಂದರೆ ಸತ್ತ ಅರ್ಚಕರ ಜಾಗಕ್ಕೆ ಇನ್ನೊಬ್ಬರು ಅರ್ಚಕರು ಬಂದಿದ್ದು ಆ ಜಮೀನು ತನಗೆ ಸೇರಬೇಕಾದು ಧರ್ಮ, ಆದ್ದರಿಂದ ಸಿಕ್ಕಬೇಕಾಗಿರುವ ಪರಿಹಾರಕ್ಕೆ ಹಕ್ಕುದಾರ ತಾನು ಎನ್ನುತ್ತಿದ್ದಾನೆ. ಇಂಥ ಗೊಂದಲಗಳ ನಡುವೆ ಸಿಕ್ಕು ಉಸಿರು ಸಿಕ್ಕಿರುವ ವಿಧವೆಯರಿಗೆ ಭೂಸುಧಾರಣೆ ಒಂದು ವರದಾನ ಅನ್ನುತ್ತೀರ?

ದನಿ ಎತ್ತದ ಗೇಣಿದಾರರು :

ಹಳ್ಳಿಯಲ್ಲಿ ಯಾವುದೇ ಆರ್ಥಿಕ ಮತ್ತು ರಾಜಕೀಯ ಪ್ರಭಾವ ಇಲ್ಲದ ಸಣ್ಣ ಭೂ ಹಿಡುವಳಿ ಇರುವ ರೈತರ ಭೂ ಒಡೆತನವನ್ನು ಕಸಿಯಲು ಗೇಣುದಾರರು ಸರ್ಕಾರಕ್ಕೆ **Form no. 7** ಅನ್ನು ಸಲ್ಲಿಸಲು ಹೆದರಲಿಲ್ಲ ಆದರೆ ರಾಜಕೀಯ, ಆರ್ಥಿಕ ಮತ್ತು ಮತೀಯ ಪ್ರಭಾವ ಹೊಂದಿರುವ ದೊಡ್ಡ ಜಮೀನ್ದಾರರ ಭೂಮಿಯನ್ನು ಗೇಣಿಗೆ ಮಾಡುತ್ತಿದ್ದ ರೈತರು ಸರ್ಕಾರಕ್ಕೆ ಒಡೆತನದ ಹಕ್ಕನ್ನು ಕೇಳುವ ಅರ್ಜಿಯನ್ನು ಸಲ್ಲಿಸಲು ಹೆದರಿದರು ಅಲ್ಲದೆ ಈ ರೀತಿಯಲ್ಲಿ ಅರ್ಜಿ ಸಲ್ಲಿಸಬಹುದು ಅನ್ನುವ ತಿಳುವಳಿಕೆ ಕೊಡಬೇಕಾಗಿದ್ದ ಅಧಿಕಾರಿಗಳು ಶ್ರೀಮಂತ ರೈತರ ಜೇಬಿನಲ್ಲಿ ಬಿದ್ದಿದ್ದರಿಂದ ಈ ವಿಷಯ ಅವರಿಗೆ ಸರಿಯಾಗಿ ತಲುಪಲೇ ಇಲ್ಲ. ಸುಮಾರು 20 ಲಕ್ಷ ಗೇಣುದಾರರಿರುವ ಕರ್ಣಾಟಕದಲ್ಲಿ ಗೇಣುದಾರರು ಸಲ್ಲಿಸಿರುವ ಅರ್ಜಿಗಳು ಕೇವಲ 8·17 ಲಕ್ಷ. ಅಂದರೆ ಹಳ್ಳಿಗಳಲ್ಲಿ ಶ್ರೀಮಂತ ಜಮೀನ್ದಾರನ ವಿರುದ್ಧ ಸೊಲ್ಲೆತ್ತಲು ಹೆದರಿ ಬಾಳುವ ಉಳಿದ 12 ಲಕ್ಷ ಗೇಣಿದಾರರು ಒಳಗೊಳಗೆ ಮಗುಂಕ ಆಗಿ ಗಪ್ ಚಿಪ್ ಆಗಿದ್ದಾರೆ ಅಥವಾ ಭೂ ಒಡೆಯರು ಇವರನ್ನು ನಿರ್ದಾಕ್ಷಿಣ್ಯವಾಗಿ ಒಕ್ಕಲೆಬ್ಬಿಸುತ್ತಿದ್ದಾರೆ

ಸರ್ಕಾರದ ಕಾನೂನುಗಳು ಹಳ್ಳಿಯ ನೆಲ ಮುಟ್ಟುವುದಕ್ಕೆ ಮುಂಚೆಯೇ ಹಳ್ಳಿಯ ಸರ್ಕಾರವಾದ ಪಂಚಾಯ್ತಿಗಳು ಬಡವರು ಕಾನೂನನ್ನು ಬಳಸಿಕೊಳ್ಳದಂತೆ ದನಿ ಎತ್ತುವುದಕ್ಕೆ ಮುಂಚೆಯೇ ಕೊರಳು ಹಿಸಕುತ್ತವೆ. ಇದಕ್ಕೊಂದು ಉದಾಹರಣೆ ನೋಡಿ,

ಮೈಸೂರು ತಾಲ್ಲೂಕಿನ ಕೇರ್ಗಳ್ಳಿಯ ಶಾನು ಭೋಗರು 8 ಎಕರೆ ಬಾಗಾಯ್ತು ಜಮೀನನ್ನು ದಾಸನ ಕೊಪ್ಪಲಿನ ಹರಿಜನ ಮಂಚಯ್ಯನಿಗೆ ಗೇಣಿಗೆ ಕೊಟ್ಟಿದ್ದರು ಅವನು 8–10 ವರ್ಷಗಳ ಕಾಲ ಈ ತೋಟದಲ್ಲಿ ದುಡಿದು ಶಾನು ಭೋಗರಿಗೆ ಗೇಣಿ ಸಲ್ಲಿಸುತ್ತಿದ್ದ. ಗೇಣಿದಾರರ ಒಡೆತನದ ಕಾನೂನು ಜಾರಿಗೆ ಬಂದಾಗ ಶಾನುಭೋಗರು ಹುಶಾರಾಗಿ 'ಹಳ್ಳಿಯ ವಿಷಯ ಕೋರ್ಟ್ ಕಛೇರಿಗೆ ಯಾಕೆ ಹೋಗಬೇಕು ಊರಿನಲ್ಲಿ ಪಂಚಾಯ್ತಿ ಇಲ್ಲವ' ಅಂದದ್ದೆ ಪಂಚಾಯ್ತಿ ಸೇರಿಸಿ 2 ಸಾವಿರ ರೂ ಪರಿಹಾರ ಕೊಟ್ಟು ಲಕ್ಷಾಂತರ ರೂಪಾಯಿ ಬೆಲೆ ಬಾಳುವ 8 ಎಕರೆ ತೋಟವನ್ನು ಹರಿಜನ ಮಂಚಯ್ಯನಿಂದ ವಾಪಸ್ಸು ಪಡೆದರು. ಕೋರ್ಟ್, ಕಛೇರಿ, ಸರ್ಕಾರ ಅಂತ ಹೆದರುವ ಮಂಚಯ್ಯ ಕೂಡ ಊರಿನ ಹತ್ತೂಜನ ಹೇಳಿದ್ದೇ ಸರಿಯಾದ ನ್ಯಾಯ ಅಂತ ಒಪ್ಪಿಕೊಂಡ.

ಮುನಿವೆಂಕಟಪ್ಪನವರ ಸಸ್ಪೆಂಡ್ ರದ್ದಿಗೆ ಒತ್ತಾಯ

ಸಿದ್ದಾಪುರ : ಸ್ಥಳೀಯ ಪಟ್ಟಭದ್ರ ಹಿತಾಶಕ್ತಿಗಳ ಸಿತೂರಿ ಹಾಗು ಒತ್ತಾಯದಿಂದಾಗಿ ಸಿದ್ದಾಪುರದ (ಉತ್ತರ ಕನ್ನಡ) ಕ್ಷೇತ್ರಾಭಿವೃದ್ಧಿ ಅಧಿಕಾರಿ ಮತ್ತು ದಲಿತ ಸಾಹಿತಿ ವಿ. ಮುನಿವೆಂಕಟಪ್ಪ ಅವರನ್ನು ರಾಜ್ಯ ಸರ್ಕಾರವು ಅವರ ಈಚಿನ ಕವನ ಸಂಕಲನದಲ್ಲಿ ಕೆಲವು ಆಕ್ಷೇಪಾರ್ಹ ಅಂಶಗಳಿವೆಂಬ ನೆಸವನ್ನೊಡ್ಡಿ ಅವರನ್ನು ಸಸ್ಪೆಂಡ್ ಮಾಡಿರುವುದನ್ನು ಸ್ಥಳಿಯ ಸಿದ್ದಾಪುರ ಶಾಖೆಯ ದಲಿತ ಸಂಘರ್ಷ ಸಮಿತಿ ಉಗ್ರವಾಗಿ ಖಂಡಿಸಿದೆ

ಸರ್ಕಾರವು ವಿ. ಮುನಿವೆಂಕಟಪ್ಪ ಅವರ ಈ ಸಸ್ಪೆಂಡ್ ಆಜ್ಞೆಯನ್ನು ಕೂಡಲೇ ಹಿಂತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯ ಪಡಿಸಿದ್ದಾರೆ

ನಿಷ್ಠಾವಂತ ಅಧಿಕಾರಿಯಾದ ಶ್ರೀ ಮುನಿವೆಂಕಟಪ್ಪನವರು ಬಡವರ–ಹಿಂದುಳಿದವರ ಪರವಾಗಿ ಮಾಡಿದ ಒಳ್ಳೆಯ ಕೆಲಸಗಳನ್ನು ಕಂಡು ಕರುಬಿದ ಸ್ಥಳೀಯ ಜಾತ್ಯಂಧ ಪಟ್ಟಭದ್ರ ಹಿತಾಸಕ್ತಿಗಳು ಶ್ರೀ ಮುನಿವೆಂಕಟಪ್ಪನವರ ಸಸ್ಪೆಂಡಿಗೆ ಕಾರಣವಾಗಿವೆ ಎಂದು ದಲಿತ ಸಂಘರ್ಷ ಸಮಿತಿ ದೂರಿದೆ.

ಕರ್ನಾಟಕದಲ್ಲಿ ಹೊಸ ರಾಜಕೀಯ ಚಿಂತನೆ:

ದಲಿತ ಸಂಘರ್ಷ ಸಮಿತಿ (ದ. ಸಂ.ಸ.) ಯವರ
ಹೊಸ ರೀತಿಯ ಬಂಡಾಯ ಇತ್ತೀಚೆಗೆ (ಫೆಬ್ರವರಿ
27) ಕರ್ನಾಟಕದಲ್ಲಿ ಕಂಡು ಬಂತು. ಹರಿಜನರಿ
ಗಾಗುತ್ತಿರುವ ಕಿರುಕುಳವನ್ನು ಕಂಡೂಕಾಣದವ
ರಂತೆ ಕುಳಿತ ದಲಿತ ಶಾಸಕರ ಮತ್ತು ಸಂಸತ್
ಸದಸ್ಯರ ವಿರುದ್ಧ ಈ ಚಳುವಳಿ ನಡೆಯಿತು.
ಸಮಿತಿಯ ಪ್ರತಿನಿಧಿಗಳು ದಲಿತ ಮುಖಂಡರುಗಳ
ಕ್ರೂರ ಮೌನವನ್ನು ಖಂಡಿಸಲು ಸಮಿತಿಯ ಸದ
ಸ್ಯರು ಹಾಗೂ ಬೆಂಬಲಿಗರನ್ನು ಕರೆದರು. ದಲಿತ
ತನವನ್ನೇ ಬಂಡವಾಳವಾಗಿಸಿಕೊಂಡು ಗದ್ದುಗೆ
ಏರಿದ ಮುಖಂಡರುಗಳು ಕ್ರಮೇಣ ವ್ಯವಸ್ಥೆಯಲ್ಲಿ
ಒಂದಾಗಿ ಹೋಗಿರುವ ದುರಂತ ಪರಿಸ್ಥಿತಿಯನ್ನು
ಕರಪತ್ರಗಳು ಹೀಗಳೆದವು. ದಲಿತರ ದಮನಕ್ಕೆ
ಕೈಎತ್ತಿದವರನ್ನು ಸರಿಯಾಗಿ ಶಿಕ್ಷಿಸುವವರೆಗೆ ದಲಿತ
ಶಾಸಕ ಮುಖಂಡರು ಸಂಸತ್ ಹಾಗೂ ಶಾಸನ
ಸಭೆಗಳಿಗೆ ಬಹಿಷ್ಕಾರ ಹಾಕಬೇಕು ಮತ್ತು
ಜಮೀನುದಾರರ ಬಳಿ ಇರುವ ಶಸ್ತ್ರಗಳನ್ನು ಸರ್ಕಾರ
ವಶಪಡಿಸಿಕೊಂಡು, ಆತ್ಮರಕ್ಷಣೆಗಾಗಿ ದಲಿತರಿಗೆ
ಶಸ್ತ್ರಗಳನ್ನು ಒದಗಿಸುವವರೆಗೆ ಈ ಮುಖಂಡರುಗಳು
ಸಂಸತ್ ಮತ್ತು ಶಾಸನಸಭೆಗಳ ಮುಂದೆ ಧರಣಿ
ಕೂರಬೇಕೆಂದು ದ. ಸಂ. ಸ. ಆಗ್ರಹ ಪಡಿಸಿತು.
ಒಂದು ವೇಳೆ ಮುಖಂಡರುಗಳು ಈ ಶರತ್ತಿಗೆ
ಬಗ್ಗದೇ ಹೋದರೆ ಅವರ ರಾಜೀನಾಮೆಗೆ ಸಮಿತಿ
ಒತ್ತಾಯಿಸಬೇಕಾಗುವುದೆಂದು ತೀರ್ಮಾನ ತೆಗೆದು
ಕೊಳ್ಳಲಾಯಿತು.

ದ. ಸಂ ಸಮಿತಿಯ ಈ ಚಳವಳಿಯ ಉಗಮ
ಬಹಳ ಅರ್ಥಪೂರ್ಣವಾಗಿದೆ. ತುಳಿಯಲ್ಪಟ್ಟ
ಜನಾಂಗವೊಂದು ತನ್ನೊಳಗನ್ನು ತಾನೇ ಪರೀಕ್ಷಿಸಿ
ಕೊಳ್ಳುವ ಅಂತರ್ನೋಟಕ್ಕೆ ಸಿದ್ಧವಾದ ಈ ಬಗೆ
ಅತ್ಯಂತ ಹೊಸದು ಎಂದು ತೋರುತ್ತದೆ. ಸಾಮಾ
ಜಿಕವಾಗಿ ಮತ್ತು ಆರ್ಥಿಕವಾಗಿ ತಮ್ಮನ್ನು ಶತ
ಮಾನಗಳಿಂದ ತುಳಿಯುತ್ತಾ ಬಂದ ಮೇಲು ಜಾತಿ
ಮತ್ತು ಮೇಲುವರ್ಗದವರತ್ತ ತಮ್ಮ ಕ್ರೋಧವನ್ನು
ಕೋಪಿಯನ್ನು ಗುರಿಮಾಡುವುದಕ್ಕೆ ಅರ್ಥವಿರಾಮ
ವನಿಕ್ಕಿ, ತಮ್ಮ (ದಲಿತರ) ಮಧ್ಯದಿಂದಲೇ ಸಿಡಿದು
ಹಾರಿ, ಏಣಿಯ ಮೇಲೆ ಹಂತಹಂತವಾಗಿ ಏರಿ,
ತಮ್ಮನ್ನು ಮೂಡಿಸಿದ ಮೂಲ ದೇವರುಗಳನ್ನೇ
ಮರೆತು ವ್ಯವಸ್ಥೆಯ ಬೃಹತ್ ಗರ್ಭದಲ್ಲಿ ಕರಗಿ
ಗುರುತು ಸಿಕ್ಕದಂತೆ ಮರೆಯಾಗಿ ಕುಳಿತವರನ್ನು
ಸ್ವಲ ಎಚ್ಚರಿಸಿ ಕಾರ್ಯಮಗ್ನರಾಗುವಂತೆ ಮೂದ
ಲಿಸುವುದಕ್ಕೆ ಸಮಿತಿ ಅಣಿಯಾಯಿತು. ದಲಿತರ
ಗುಂಪಿನಲ್ಲೇ ಇರುವ ಆರ್ಥಿಕ ತಾರತಮ್ಯವನ್ನು
ಗಮನದಲ್ಲಿಟ್ಟುಕೊಂಡು ದೊರಕಬಹುದಾದ
ಸೌಲಭ್ಯಗಳು ಆದಷ್ಟೂ ಮೊದಲನೇ ಜನಾಂಗ
(Frist Generation) ದ ದಲಿತರಿಗೇ ದೊರೆ
ತರೆ ಶ್ರೇಯಸ್ಸಾಗುತ್ತದೆ ಎಂದು ದ. ಸಂ. ಸ.
ಸೂಕ್ಷ್ಮವಾಗಿಯಾದರೂ ತಿಳಿಸುತ್ತಾ ಬಂದಿದೆ.
ಸಿರಿವಂತ ದಲಿತರಿಗೇ ಹೆಚ್ಚು ಲಾಭವಾಗುತ್ತಿದೆ
ಎಂಬ ಅಂಶದತ್ತ ದ.ಸಂ.ಸಮಿತಿಯೇ ಗಮನ ಸೆಳೆ
ದಿದೆ ಈ ಬಗೆಯ ಅಂತರ್ನೋಟದಿಂದ ಕೆಲವರಾ
ದರೂ ದಲಿತ ಯುವಕರಿಗೆ ಸಮಾಜದ ಆರ್ಥಿಕ
ಅಡಿಪಾಯದ ಪ್ರಾಮುಖ್ಯತೆಯ ಬಗ್ಗೆ ಮತ್ತು
ಸಾಂಪ್ರದಾಯಿಕವಾದ ಸಾಮಾಜಿಕ ವರ್ಗೀಕರಣದ
ಇತಿಮಿತಿಗಳ ಬಗ್ಗೆ ವಿಶ್ಲೇಷಣಾತ್ಮಕವಾಗಿ ಪರೀಕ್ಷಿ
ಸುವ ಅವಕಾಶ ಒದಗಿದೆ.

ಹೊಸಧೋರಣೆ ಹಾಗೂ ಮಾರ್ಗವನ್ನು
ಸಮಿತಿ ಹೆಚ್ಚು ಹೆಚ್ಚು ಜನಪ್ರಿಯಗೊಳಿಸುದುದಕ್ಕೆ
ಅನೇಕ ಕಾರಣಗಳಿವೆ. ದಲಿತ್ ಪ್ಯಾಂಥರ್‌ನ
ಚಟುವಟಿಕೆಗಳು (ಪ್ರಾರಂಭಿಕ ದಿನಗಳಲ್ಲಿ) ಇಲ್ಲಿ
ಅರ್ಥಮರ್ಥ ಉತ್ತರಕೊಡಬಲ್ಲವು. ಜೊತೆಗೆ
ಪ್ರಗತಿಗಾಮಿಗಳೂ, ಬುದ್ಧಿಜೀವಿಗಳೂ ಆದ ಕೆಲವು
ದಲಿತ ತರುಣರು ಕರ್ನಾಟಕದಲ್ಲಿ ತಾವು ಒಂದು
ಬಗೆಯ ಗೊಂದಲದಲ್ಲಿದ್ದೇವೆ ಎಂಬಂಶವನ್ನು ಮನ
ಗಂಡದ್ದು ಇನ್ನೊಂದು ಕಾರಣವಿರಬಹುದು.
ತಮ್ಮೆಲ್ಲ ನೋವುಗಳನ್ನು ಗದ್ದುಗೆಗೆ ಒಯ್ಯುವು
ದಕ್ಕೆ ಮುಖಂಡರುಗಳೇ ಸರಿಯಾದ 'ಗುಡ್ಡರು,
ಎಂದುಕೊಳ್ಳುವುದು ತಪ್ಪು ಕಲ್ಪನೆ, ಈ ಮುಖಂ
ಡರುಗಳನ್ನು ನೆಚ್ಚಿಕೊಂಡರೆ ಏನೂ ಬಗೆಹರಿಯುವು
ದಿಲ್ಲ ಎಂದು ಅವರಿಗೆ ತೋರಿತಲ್ಲದೆ ಎಷ್ಟರಮಟ್ಟಿಗೆ
ತಮ್ಮನ್ನವರು ಪ್ರತಿನಿಧಿಸುತ್ತಾರೆ ಎಂಬ ಶಂಕೆಯೂ
ಅವರಲ್ಲಿ ಮೂಡಿತು. ಮೇಲೇರಿಹೋದ ಈ ಮುಖಂ
ಡರುಗಳು ಚುನಾಯಿಸಲ್ಪಟ್ಟ ಮರುಕ್ಷಣದಿಂದಲೇ
ಒಂದು ಬಗೆಯ "ಔದಾರ್ಯ", "ಸಮದೃಷ್ಟಿ"ಗೆ
ತಮ್ಮನ್ನು ಬಲಿಯಾಗಿಸಿಕೊಂಡು, ದೊಡ್ಡ ಗದ್ದುಗೆ
ಯನ್ನು ಎದುರು ಹಾಕಿಕೊಳ್ಳುವ ತಂಟೆಗೆಹೋಗದೆ
ತಮ್ಮ ಜಾಗವನ್ನು ಜಾಗರೂಕತೆಯಿಂದ ರಕ್ಷಿಸಿ
ಕೊಳ್ಳುತ್ತ ಸಂಭಾವಿತರಂತೆ ನಿರ್ಲಿಪ್ತರಾದುದು
ಸ್ವಾರಸ್ಯಕರ. ಕಳೆದ ಮೂರು ನಾಲ್ಕು ವರ್ಷಗಳಿಂ
ದೀಚೆಗೆ ಅಲ್ಲೊಬ್ಬ ಇಲ್ಲೊಬ್ಬ ಎಚ್ಚೆತ್ತ ದಲಿತ ತರು
ಣರು ಎದುರಾಗಿರುವ ಸಮಸ್ಯೆಯನ್ನು ಹೊಸ ದೃಷ್ಟಿ
ಕೋನದಿಂದ ನೋಡುವ ಧೈರ್ಯಮಾಡಿದರೆನ್ನ
ಬೇಕು.

'ಭೂಸಾ ಪ್ರಕರಣ'ವೆಂದು ಪ್ರಸಿದ್ಧಿಯಾಗಿರುವ
ಘಟನೆಯ ನಿಮಿತ್ತದಿಂದಾಗಿ ದಲಿತರ ಚಳುವಳಿಗೆ
ಹೊಸ ದಿಕ್ಕು ದೊರೆತಂತೆ ಕಾಣುತ್ತದೆ. 1973ರಲ್ಲಿ
ಆಗಿನ ಕಂದಾಯ ಸಚಿವರಾಗಿದ್ದ ಬಸಲಿಂಗಪ್ಪ
ನವರು ತಮ್ಮ ಭಾಷಣವೊಂದರ ಮಧ್ಯದಲ್ಲಿ ಕನ್ನಡ
ಸಾಹಿತ್ಯದಲ್ಲಿರುವ ಮುಕ್ಕಾಲು ಮೂರು ವೀಸೆ
ಪಾಲೆಲ್ಲ "ಭೂಸ" ಎಂದಿದ್ದರು. ಅಂದರೆ, ಈ
ಸಾಹಿತ್ಯವನ್ನೆಲ್ಲ ಶೋಧಿಸಿದರೆ ದಲಿತನಿಗೆ ಆಗುವ
ಲಾಭ ಅತ್ಯಲ್ಪ ಎಂದು ಅವರಅರ್ಥ. ಈ ಮಾತನ್ನೇ
ಮೂಲಮಾಡಿಕೊಂಡು ಶಾಸನಸಭೆಯ ಒಳಗೂ
ಹೊರಗೂ ಉದ್ಭವವಾದ ವಾಕ್‌ಘರ್ಷಣೆ
ದೈಹಿಕವಾದ ಹೊಡೆದಾಟದಲ್ಲಿ ಮುಟ್ಟಿ
ಜಾತಿ ಯುದ್ಧದ ಗಾತ್ರವನ್ನು ಪಡೆದು
ಮೈಸೂರು ಮತ್ತಿತರ ಊರಿನ ದಲಿತರು ಬಹ
ನೋವಿಗೀಡಾದರು. ಬಸವಲಿಂಗಪ್ಪನವರು
ಪದವಿಯಿಂದ ರಾಜೀನಾಮೆ ಕೊಡುವವರೆಗೂ
ಮಧ್ಯಮ ಜಾತಿಯ ಜನರು ಬಹಳ ಚಟ
ಯಿಂದ ಗುರಿಸಾಧಿಸಿದರು.

ದಲಿತರಲ್ಲಿ ಹೊಸ ಪ್ರಜ್ಞೆಯನ್ನು ಮೂಡಿ
ಈ ಭೂಸಾ ಪ್ರಕರಣ ಬಹಳಷ್ಟು ಸಹಾಯವ
ಎಲ್ಲದಕಿಂತಲೂ ಹೆಚ್ಚಾಗಿ, ಒಬ್ಬ ಹರಿಜನ
ತನ್ನ ಜನಕ್ಕೆ ಅವರ ಏಳಿಗೆಗೆ ಕನ್ನಡಸಾಹಿ
ಉಪಯುಕ್ತತೆ ಮತ್ತು ಅದರ ಅಧ್ಯಯನದ ಲ
ಲಾಭಗಳೇನು ಎಂದು ಪ್ರಶ್ನಿಸಿದುದನ್ನೇ ನೆಪ
ಕೊಂಡು ಅವರು ರಾಜಿನಾಮೆ ಕೊಡುವ
ಪಟ್ಟು ಬಿಡದೆ ಹಟಮಾಡಿದ ಮೇಲ್ವರ್ಗ
ದಬ್ಬಾಳಿಕೆಗೆ–ದಲಿತರ ಕಣ್ಣು ತೆರೆಯಿತು.

ಲಲಿತೆ ನಟರಾಜ್

ಕರ್ನಾಟಕದಲ್ಲಿ ದಲಿತರ ಪುರೋಭಿವೃದ್ಧಿಯ
ಅಷ್ಟಾಗಿ ಭಾಗವಹಿಸದೇ ಇರುವ ವಾಮಪ
ಯರ ಮೌನವೂ ಅಷ್ಟೇ ಸೋಜಿಗವನ್ನು
ಮಾಡುವ ಸಂಗತಿಯಾಗಿದೆ. ಜಾತಿ ಎಂಬುದು
ವೆಂಬುದರ ಮೇಲು ಹೊದಿಕೆ ಮಾತ್ರ ಎಂಬ
ನುಡಿವಂತ ಮಾರ್ಕ್ಸ್‌ವಾದಿಗಳಿಗೆ ಮನದಟ
ಬೇಕು. ಒಂದು ಬಗೆಯ ಸಂಕೀರ್ಣತೆಯಿ
ಕೂಡಿದ ಅಸ್ಪೃಶ್ಯರ ಸಮಸ್ಯೆ ಏಕೋ ಏನೋ
ಸಿ.ಪಿ.ಐ. ಮತ್ತು ಸಿ.ಪಿ.ಐ.(ಎಮ್) ಜನರ ಗ
ಸೆಳೆಯಲಾಗಿಲ್ಲ. ಗ್ರಾಮಾಂತರ ಕರ್ನಾಟಕ
ಈ ಕಮ್ಯುನಿಷ್ಟ್ ಪಕ್ಷಗಳು ಬಲವಾಗಿಲ್ಲದಿರುವ
ಇನ್ನೊಂದು ಕಾರಣವಿರಬಹುದು. ಇದರ ಜೊ
ಹರಿಜನ ಜನಾಂಗದಲ್ಲಿ ಜಮೀನಿರದ ಕೂಲಿಗಾ
ಬಹುಪಾಲು; ಈ ಭಾಗವನ್ನು ಸ್ವಲ್ಪ ಅಲ್ಲಾ
ಎಚ್ಚರಿಸಲು ಕಮ್ಯುನಿಷ್ಟರಿಗೆ ಇನ್ನೂ ಸ
ವಾಗಿಲ್ಲ. ಅವರನ್ನು (ದಲಿತರನ್ನು) ಉತ್ತೇಜಿಸ
ದಕ್ಕೆ ಸಮಯ ಒದಗಿಬಂದಿಲ್ಲವೆಂಬ ನೆಪವೂ ಅ
ಮುಂದಿರುವಂತೆ ತೋರುತ್ತದೆ.

ಕಮ್ಯುನಿಷ್ಟೇತರ ಸಮತಾವಾದಿಗಳ ಪ್ರ
ಕರ್ನಾಟಕದಲ್ಲೂ ಇಲ್ಲದಿಲ್ಲ. ರಾಜ್ಯದಲ್ಲಿ ಮೆ
ಮೊದಲ ಬಾರಿಗೆ ಬಹಳ ಮನದಟ್ಟಾಗುವಂತೆ
ಸಮಸ್ಯೆಯ ವಿಶ್ಲೇಷಣೆಯನ್ನು ಕೈಗೆತ್ತಿಕೊಂಡ
ಲೋಹಿಯಾವಾದಿಗಳು. ಈ ದಿಕ್ಕಿನಲ್ಲಿ ಸಾ

ಸಂಘರ್ಷ ಸಮಿತಿಯ ಹೋರಾಟ

ವಿಶೇಷ ಲೇಖನ

ಚರ್ಚೆ ಹುಟ್ಟಿಕೊಳ್ಳುವುದಕ್ಕೆ ಅವರ ಸೇವೆ ಗಣನೀಯವಾಗಿದೆ. ಆದರೂ ಅವರು ಇಬ್ಬಗೆಯ ದೌರ್ಬಲ್ಯಕ್ಕೆ ಗುರಿಯಾಗಿದ್ದಾರೆ. ಮೊದಲನೆಯದಾಗಿ, ಮೂಲಭೂತ ಆರ್ಥಿಕ ಸಮಸ್ಯೆಗಳನು ಎದುರಿಸುವ ಅವರ ಮಾರ್ಗ **eclectic** ಆಗಿದೆ ಇದರಿಂದ ಅವರ ಜಾತಿ ವಿಶ್ಲೇಷಣೆಯ ರೀತಿಯೂ ಕೂಡ ಅಪೂರ್ಣವಾಗೇ ಬಿಡುತ್ತದೆ. ಎರಡನೆಯದಾಗಿ, ಅವರು ತಮ್ಮೆಲ್ಲ ಚೈತನ್ಯವನ್ನು ಬ್ರಾಹ್ಮಣರ ವಿರುದ್ಧವೇ ವ್ಯಯಮಾಡಿಬಿಟ್ಟು, ಇತ್ತೀಚೆಗೆ ತಲೆ ಎತ್ತುತ್ತಿರುವ ಮಧ್ಯಮ ಜಾತಿಯ ಜಂತುಗಳ ಕಡೆಗೆ ಅವರು ಗಮನ ಹರಿಸುವುದೇ ಇಲ್ಲವಾಗಿ ನಿಜವಾದ ಶೋಷಿತನನ್ನು ಬಿಟ್ಟು ಬಿಡುವ ಸಂಭವವೇ ಹೆಚ್ಚು. ದಲಿತರು ಎದುರು ನೋಡುವ ಪರಿಹಾರಗಳು ಲೋಹಿಯಾ ಸಮಾಜ ವಾದಿಯ ಬಳಿಯೂ ಇಲ್ಲದಿರುವುದು ಇಂದಿನ ಕಟು ಸತ್ಯ.

ದ. ಸಂ. ಸಮಿತಿಯ ಬೆಳವಣಿಗೆಗೆ ಕಾರಣವೇನೆಂದರೆ ಕರ್ನಾಟಕದಲ್ಲಿ ಶ್ರೇಷ್ಠ ಮಟ್ಟದ ಪ್ರಗತಿಗಾಮಿ ಬರಹಗಾರರು ಕಂಡು ಬಂದಿರುವುದು—ಇವರು ಮತ್ತಷ್ಟು ಕಿರಿಯ ಬರಹಗಾರರನ್ನು ಸೃಷ್ಟಿಸುವಲ್ಲಿ ವಿಜಯಿಗಳಾಗಿರುವುದು. ಇದರ ಫಲವಾಗಿ ಇಂದು ನಮಗೆ ಕಾಣುತ್ತಿರುವ ಹೊಸ ಸಾಹಿತ್ಯದ ಅಲೆಯೇ ಬಂಡಾಯ ಸಾಹಿತ್ಯ—ಕನ್ನಡದ ಶ್ರೇಷ್ಠ ಮಟ್ಟದ ಬರಹಗಾರರಲ್ಲಿ ಬಂಡಾಯ ಸಾಹಿತಿಗಳೂ ಇದ್ದಾರೆ ಎಂಬುದನ್ನು ಅತ್ಯಂತ ಹೆಮ್ಮೆಯಿಂದ ದಲಿತರು ಹೇಳಿಕೊಳ್ಳಬಹುದು.

ದ. ಸಂ. ಸಮಿತಿ ಈಗ ಸಾಕಷ್ಟು ಬಲಗೊಂಡಿರುವುದು ಸರ್ವವಿಧಿತ. ದಲಿತರ ನಡುವೆಯೇ 'ಶ್ರೀಮಂತ' ದಲಿತರು ಮತ್ತು ಅಧಿಕ ಸಂಖ್ಯೆಯ ಬಡದಲಿತರು ಎಂಬ ಎರಡು ಪಂಗಡಗಳಾಗಿರುವ ಅಂಶವನ್ನು ದ ಸಂ.ಸ. ಎತ್ತಿ ತೋರಿಸಿದೆ. ಕೇವಲ ಹರಿಜನರನ್ನಷ್ಟೇ ಅಲ್ಲದೆ ಎಲ್ಲ ಜಾತಿಯ ಬಡವರನ್ನು ದೀನರನ್ನು ತನ್ನ ತಬ್ಬಿಗೆ ಸೆಳೆದುಕೊಳ್ಳುವ ಗುರಿಯನ್ನು ಈ ಸಮಿತಿ ಹೊಂದಿದೆ. ಎಲ್ಲ ರೀತಿಯ ಶೋಷಣೆಯನ್ನು ಧಿಕ್ಕರಿಸುವ ಪಣ ತೊಟ್ಟಿರುವ ಸಮಿತಿಯ ಕಾರ್ಯಕ್ಷೇತ್ರ ಬಹಳ ವಿಶಾಲವಾದುದಾಗಿದೆ. ಉದ್ಯೋಗಕ್ಕಾಗಿ ಜಾತಿಜಾತಿಗಳ ನಡುವೆ ನಡೆಯುವ ಪೈಪೋಟಿಯಲ್ಲಿ ಕರ್ನಾಟಕಕ್ಕೆ, ಅದರಲ್ಲೂ ಹಳೇ ಮೈಸೂರು ರಾಜ್ಯಕ್ಕೆ ಮೊದಲ ಸ್ಥಾನ ಸಲ್ಲುತ್ತದೆ. ರಕ್ಷಣಾತ್ಮಕವಾದ ಮೀಸಲಾತಿಗೆ ಸಂವಿಧಾನದ ಪೂರ್ವದ ದಿನಗಳಿಂದಲೂ ವಿವಿಧ ಕೋಮುಗಳು ನಾಮುಂದು ತಾಮುಂದು ಎಂದದ್ದಿದೆ. ಸಂಖ್ಯಾ ಬಾಹುಳ್ಯವಿರುವ ಅನೇಕ ಜಾತಿಯವರೂ ಮೀಸಲಾತಿಯಿಂದ ಕಳೆದ ಐವತ್ತು ವರ್ಷಗಳಿಂದ ಒಂದಲ್ಲ ಒಂದು ರೀತಿಯಲ್ಲಿ ಲಾಭ ಪಡೆದಿದ್ದರೆನ್ನಲಡ್ಡಿಯಿಲ್ಲ. ಹೀಗೆ ಮೀಸಲಾತಿಗೆ ಒಳಗಾದ ಇತರ ಜಾತಿಯವರಿಗೆ, ತಮ್ಮ ಸಂಗಡದಲ್ಲೇ ಅರ್ಹರನ್ನು ಬಿಟ್ಟು ಅನರ್ಹರಿಗೇ ಹೆಚ್ಚಿನ ಸೌಲಭ್ಯ ದೊರೆಯುತ್ತಿದೆ ಎಂಬ ಅಂತನೋಟ ಸಾಧ್ಯವಾಗಲಿಲ್ಲ. ಸೌಲಭ್ಯಗಳು ಯಾರಿಗೆ ಸಂದಾಯವಾಗುತ್ತಿವೆ ಎಂಬುದರ ಕಡೆ ಮೊದಲು ಗಮನ ಹರಿಸಿದವರು ಸಮಿತಿಯವರು. ತಮ್ಮ ಜನಾಂಗದವರಿಂದ ಮೇಲೇರಿ ಮೂಲವನ್ನೇ ಮರೆತು ಮತ್ತರಾದ ಕೆ. ಜಿ. ಎಫ್. ರಿಪಬ್ಲಿಕನ್ ಪಕ್ಷದ ನಾಯಕರಾದ ಸಿ.ಎಂ. ಆರ್ಮುಗಂ ಅವರ ವಿರುದ್ಧ ದಲಿತರು ಇತ್ತೀಚೆಗೆ ಘೋಷಣೆ ಕೂಗಿದರು. ದಲಿತರ ಮತ್ತು ಹರಿಜನರ ಬಗ್ಗೆ ಮಾತನಾಡುವುದು ಸುಲಭವಾದರೂ ಈ ಜನಾಂಗದ ಜನ ಇಡಿಯಾಗಿ ಸಿಡಿದೇಳುವ ಮನೋಭಾವದವರಲ್ಲ ಅದರಲ್ಲೂ "ಬಲಗೈ" ಮತ್ತು "ಎಡಗೈ" ಎಂಬ ಭೇಧವಿರುವುದೊಂದು ದುರಂತ. ಸಾಮಾನ್ಯವಾಗಿ, "ಬಲಗೈ"ಯವರೆ ರಾಜಕೀಯ ಮತ್ತಿತರ ಕ್ಷೇತ್ರಗಳಲ್ಲಿ ಮೇಲುಗೈ ಸಾಧಿಸಿರುವುದು ಕಂಡು ಬರುತ್ತದೆ. ಅನೇಕ ಕಾರಣಗಳಿಗಾಗಿ ದಲಿತ ಸಂಘರ್ಷ ಸಮಿತಿ ರೂಪಿಸಿಕೊಂಡಿರುವ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಗುತ್ತಿಲ್ಲ. ಗೊತ್ತಿರುವ ದಾರಿಗಳನ್ನು ಅನುಸರಿಸಿ ಜನರು ವ್ಯವಸ್ಥೆಯ ಒಡಲಿಗೇ ಸೇರಿಕೊಳ್ಳುವ ಅನೇಕ ಪ್ರಸಂಗಗಳು ಉದ್ಯೋಗಕ್ಕೆ ಕ್ಷಾಮವಿರುವ ನಮ್ಮ ಪರಿಸ್ಥಿತಿಯಲ್ಲಿ ಅಸಂಭವವಲ್ಲ. ಚಳವಳಿಯಿಂದ ಕಳಚಿಕೊಳ್ಳುವವರೂ ಅಪರೂಪವಲ್ಲ. ಅವರವರಲ್ಲೇ ಮತಭೇಧವಿರುವುದು ಇನ್ನೊಂದು ದುರ್ಬಲ ಕೊಂಡಿಯಾಗಿ ಕಾಡುತ್ತದೆ.

ಹರಿಜನರೆಂದು ಕರೆಸಿಕೊಳ್ಳುವ ಎಲ್ಲರನ್ನೂ ಕಲೆಹಾಕಿ ಒಂದುಗೂಡಿಸಿ, ಅವರಲ್ಲಿ ಸಂಪೂರ್ಣ ಐಕ್ಯಮತ್ಯವನ್ನು ನಿರ್ಮಿಸುವುದು ದ. ಸಂ. ಸಮಿತಿಯ ಮೊದಲನೆಯ ಕಾರ್ಯವೆಂದು ತೋರುತ್ತದೆ. ದಲಿತರಲ್ಲಿ ನಿಜವಾಗಿಯೂ ದುರ್ಬಲರಾದವರ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದರ ಮೂಲಕ ಸಮಸ್ಯೆಯ ವೈಶಿಷ್ಟ್ಯತೆಯನ್ನು ಸಮಿತಿ ಅರಿತುಕೊಳ್ಳಬೇಕು. ತಮ್ಮನ್ನು ಪ್ರತಿನಿಧಿಸುವವರ ಮೇಲೆ ಮೇಲಿಂದ ಮೇಲೆ ಅವರ ಜವಾಬ್ದಾರಿಯ ಬಗ್ಗೆ ಜಾಗರೂಕರಾಗಿ ಎಂದು ಒತ್ತಡ ತರುತ್ತಾ, ಸೌಲಭ್ಯಗಳು ದಲಿತರಲ್ಲಿ 'ದಲಿತರಿಗೆ' ತಲುಪುತ್ತಿವೆಯೇ ಎಂದು ಮೈಯೆಲ್ಲಾ ಕಣ್ಣಾಗಿ ನೋಡಿಕೊಳ್ಳುವ ಹೊಣೆಯನ್ನು ಸಮಿತಿ ಹೊತ್ತುಕೊಳ್ಳಬೇಕಾಗುತ್ತದೆ. ಆದರೆ ಚಳುವಳಿಯ ಈ ಹಂತದಲ್ಲಿ ಎಲ್ಲ ಜಾತಿಯ ಬಡವರನ್ನೂ ತನ್ನ ತಬ್ಬಿಗೆ ಒಳಪಡಿಸಿಕೊಳ್ಳುತ್ತೇವೆ ಎಂದು ಸಮಿತಿ ಹೊರಟರೆ ಅದರಿಂದಾಗುವ ಲಾಭಕ್ಕಿಂತ ನಷ್ಟವೇ ಹೆಚ್ಚು. ಅನು: ಸಿ. ನಾಗಣ್ಣ

*Economic & Political Weekly*ಯಿಂದ

ಪ್ರತ್ಯೇಕ ಚುನಾವಣಾ ಪದ್ಧತಿ ಅಥವಾ ಮತಾಂತರ

ಸಾವಿರಾರು ವರ್ಷಗಳಿಂದ ಸಮಾಜದ ತುಳಿತಕ್ಕೆ ಸಿಕ್ಕಿ ಪಾರಾಗದೆ ಇರುವ ಭಾರತದ ಅಸ್ಪೃಶ್ಯರು ಇಂದಿಗೂ ಸಾಮಾಜಿಕವಾಗಿ ಆರ್ಥಿಕವಾಗಿ ಪರಿತಪಿಸುತ್ತಿದ್ದಾರೆ.

ಅಸ್ಪೃಶ್ಯರ ಪಿತಾಮಹ ದಿವಂಗತ ಡಾ|| ಬಿ. ಆರ್. ಅಂಬೇಡ್ಕರವರು ತಮ್ಮ ಜನಾಂಗದ ಮೂಲಭೂತ ಹಕ್ಕುಗಳಿಗಾಗಿ ಅವರ ಜೀವನ ಪರ್ಯಂತ ಹಿಂದೂ ಸಮಾಜ ಮತ್ತು ಸರ್ಕಾರಗಳೊಡನೆ ಹೋರಾಟ ನಡೆಸಿದ್ದಾರೆ. ಅವರ ಹೋರಾಟ ಭಾರತದ ರಾಷ್ಟ್ರಾಭಿಮಾನಿಗಳ ಕಣ್ಣು ತೆರೆಸಿತು. ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಅಸ್ಪೃಶ್ಯರನು ಹರಿಜನರೆಂದು ನಾಮಕರಣ ಮಾಡಿದರೂ ಅಸ್ಪೃಶ್ಯತೆ ನಿವಾರಣೆಯಾಗಲಿಲ್ಲ. ಅವರ ಭವಣೆ ತಪ್ಪಲಿಲ್ಲ. ಇಂದಿಗೂ ಹಿಂದೂ ಸಮಾಜ ಹರಿಜನರನ್ನು ಹಿಂದೂಗಳೆಂದು ಪರಿಗಣಿಸಿಲ್ಲ. ಅವರನ್ನು ಒಂದು ಪ್ರತ್ಯೇಕ ಜನಾಂಗ ವೆಂದು ಪರಿಗಣಿಸಿದ್ದಾರೆ. ಸ್ವಾರ್ಥಿ ಸವರ್ಣೀಯರು ರಾಜಕೀಯವಾಗಿ ಹರಿಜನರನ್ನು ಹಿಂದೂಗಳೆಂದು ಒಪ್ಪಿಕೊಳ್ಳುತ್ತಾರೆಯೇ ವಿನಃ ನಿಜವಾಗಿ ಮನಃಪೂರ್ವಕವಾಗಿಯಲ್ಲ.

ಭಾರತದ ರಾಷ್ಟ್ರಾಭಿಮಾನಿಗಳು ಮುಸ್ಲಿಂ ಮುಖಂಡ ಶ್ರೀ ಮಹಮ್ಮದಾಲಿ ಜಿನ್ನಾ ಬೇಡಿಕೆಯನ್ನು ಈಡೇರಿಸಿ ಭಾರತವನ್ನು ಹಿಂದೂಸ್ಥಾನ, ಪಾಕಿಸ್ಥಾನವೆಂದು ಎರಡು ತುಂಡರಿಸಿದರು. ಹರಿಜನರ ಮುಖಂಡ ಡಾ|| ಬಿ. ಆರ್. ಅಂಬೇಡ್ಕರ್‌ರವರ "ಹರಿಜನರಿಗಾಗಿ ಅವರದೇ ಆದ ಪ್ರತ್ಯೇಕ ರಾಜ್ಯ" ಬೇಡಿಕೆಗೆ ಸೊಪ್ಪು ಹಾಕಿದರು. ಹರಿಜನರನ್ನು ಹಿಂದೂಗಳೆಂದು ಪರಿಗಣಿಸಿ ಅವರನ್ನು ಸಾಮಾಜಿಕವಾಗಿ, ಆರ್ಥಿಕವಾಗಿ ಮೇಲೆತ್ತಿ ಸಮಾಜದಲ್ಲಿ ಅವರಿಗೂ ಸರಿಸಮಾನತೆಯನ್ನು ತಂದುಕೊಡುವುದಾಗಿ ರಾಜಕೀಯ ಭರವಸೆಗಳನ್ನು ನೀಡಿದರು. ಅತ್ಯಲ್ಪ ಅವಧಿಯಲ್ಲಿ ಹರಿಜನ ಗಿರಿಜನರ ಸರಿಸಮಾನತೆಯನ್ನು ಬಯಸಿದ್ದ ಡಾ. ಅಂಬೇಡ್ಕರವರ ಪ್ರತ್ಯೇಕ ಮತದಾನ ಮೀಸಲಾತಿ ಪದ್ಧತಿಯನ್ನು ಹಿಂದೂ

(9 ನೇ ಪುಟಕ್ಕೆ)

ಪ್ರಥಮ ವಿಶ್ವ ಕನ್ನಡ ಸಮ್ಮೇಳನ

ಉಪವನಗಳ ನಗರ ಮೈಸೂರಿನಲ್ಲಿ

3—1—1983 ರಿಂದ 9—1—1983

ಈ ಸಮ್ಮೇಳನವು

* ದೇಶವಿದೇಶಗಳ ನಾನಾ ಭಾಗಗಳಲ್ಲಿ ಕಾರ್ಯೋದ್ದೇಶಗಳ ಸಾಧನೆಗಾಗಿ ಪಸರಿಸಿದ ಕನ್ನಡಿಗರೆಲ್ಲರ, ಪ್ರಥಮ ಸಮಾಗಮ ಹಾಗೂ ಸಮ್ಮೇಳನ.

* ಕನ್ನಡಿಗರಿಗೆಲ್ಲ ಅಭಿಮಾನ, ಆನಂದ ಹಾಗೂ ಸ್ಫೂರ್ತಿಯನ್ನೀಯುವ, ಅನುಪಮ ಸುಸಂಧಿ.

* ವಿವಿಧ ಕಾರ್ಯಕ್ಷೇತ್ರಗಳಲ್ಲಿ ಕೀರ್ತಿವೆತ್ತ, ಕನ್ನಡಿಗರ ಸಂಪರ್ಕ, ಸುವಿಚಾರಗಳನ್ನು ಸವಿಯುವ ಸೌಭಾಗ್ಯವಲ್ಲದೇ ಸಮಾರಂಭದ ಅಂಗವಾಗಿ ಏರ್ಪಡಿಸಿದ ವಿವಿಧ ಮನೋರಂಜನ ಕಾರ್ಯಕ್ರಮಗಳ ರಸದೂಟ.

ಕಾರ್ಯಕ್ರಮಗಳ ಇಣುಕು ನೋಟ :

* ಕನ್ನಡ ನಾಡಿನ ಕಲೆ ಸಂಸ್ಕೃತಿ, ಕೈಗಾರಿಕೆಗಳನ್ನು ಪ್ರತಿನಿಧಿಸುವ ವಸ್ತುಪ್ರದರ್ಶನ.

* ಸಮಾಂಭದ ಪ್ರತಿದಿನವೂ ನಾಟಕ, ನೃತ್ಯ, ಸಂಗೀತ, ಯಕ್ಷಗಾನ ಮತ್ತು ವೈವಿಧ್ಯಮಯ ಜಾನಪದ ಗೀತೆಗಳ ಕಾರ್ಯಕ್ರಮ.

* ಪ್ರತಿಭಾವಂತ ಲೇಖಕ ಕಲಾವಿದರಿಂದ ಕೂಡಿದ ಗೋಷ್ಠಿ ಹಾಗೂ ಕವಿಸಮ್ಮೇಳನ.

* ಭಾರತದ ಎಲ್ಲ ಭಾಷೆಗಳ ಜನಪ್ರಿಯ ಗ್ರಂಥಗಳ ಪ್ರದರ್ಶನವಲ್ಲದೇ ಅತ್ಯುತ್ತಮ 102 ಕನ್ನಡ ಗ್ರಂಥಗಳನ್ನು ಮತ್ತು 17 ಸಂಕಲನಗಳನ್ನು ಮುದ್ರಿಸಿ ಸುಲಭ ಬೆಲೆಗೆ ಒದಗಿಸುವುದು ಹಾಗೂ ಅವುಗಳನ್ನು ಎಲ್ಲ ಅಧಿಕೃತ ಕನ್ನಡ ಸಂಘಗಳಿಗೆ ಅನುದಾನ ರೂಪದಲ್ಲಿ ಉಚಿತವಾಗಿ ಕೊಡುವುದು.

* ಮೈಸೂರಿನಲ್ಲಿ ಸುಸಜ್ಜಿತ ಭವ್ಯ ರಂಗಮಂದಿರ ಹಾಗೂ ವಸತಿಗೃಹ ಹಾಗೂ ಇತರ ಜಿಲ್ಲಾ ಕೇಂದ್ರಗಳಲ್ಲಿಯೂ ರಂಗಮಂದಿರಗಳ ನಿರ್ಮಾಣ.

* ಮುಕ್ತಾಯದ ದಿನ ನಾಡಿನ ಹತ್ತೊಂಬತ್ತು ಜಿಲ್ಲೆಗಳ ವೈಶಿಷ್ಟ್ಯಗಳನ್ನು ಬಿಂಬಿಸುವ ವರ್ಣರಂಜಿತ ಮೆರವಣಿಗೆ.

'ಕರ್ನಾಟಕ ವಾರ್ತೆ'


ಪ್ರತ್ಯೇಕ ಮತದಾನ ಅಥವಾ ಸಮೂಹಿಕ ಮತಾಂತರ

(ಮಧ್ಯದ ಪುಟದಿಂದ)

ಸ್ವಾರ್ಥಿಗಳು ವಿರೋಧಿಸಿದರು. ಪ್ರತಿಯಾಗಿ ಲೋಕಸಭೆ ಮತ್ತು ರಾಜ್ಯ ಶಾಸನ ಸಭೆಗಳಿಗೆ ಹರಿಜನ ಗಿರಿಜನ ಪ್ರ ಜಾ ಸಂಖ್ಯೆಗನುಗುಣವಾಗಿ ಮೀಸಲು ಸ್ಥಾನಗಳನ್ನು ನೀಡಲು ಒಪ್ಪಿ, ಎಲ್ಲಾ ಜನಾಂಗದವರನ್ನೊಳಗೊಂಡ ಹಲವಾರು ಲೋಕಸಭಾ ಮತ್ತು ರಾಜ್ಯ ಶಾಸನ ಸಭೆಗಳ ಸ್ಥಾನಗಳನ್ನು ಆ ಜನಾಂಗದ ಅಭ್ಯರ್ಥಿಗಳಿಗಾಗಿ ಕಾದಿರಿಸಿದರು. ಇದರ ಪ್ರತಿಫಲ ಹಲವಾರು ಹರಿಜನ ಗಿರಿಜನ ರಾಜಕೀಯ ಅಭ್ಯರ್ಥಿಗಳಿಗೆ ಮತ್ತು ಬಹುಸಂಖ್ಯಾತ ಹರಿಜನ ಗಿರಿಜನೇತರರಿಗೆ ದೊರಕಿತೇ ವಿನಃ ಎಲ್ಲಾ ಹರಿಜನ ಗಿರಿಜನರಿಗೆ ಧಕ್ಕಲಿಲ್ಲ.

ಯಾವುದೇ ಲೋಕಸಭಾ ಮತ್ತು ರಾಜ್ಯಸಭೆಗಳ ಚುನಾವಣಾ ಮತದಾರರ ಕ್ಷೇತ್ರಗಳನ್ನು ತೆಗೆದುಕೊಂಡಾಗ್ಯೂ ಆಯಾಯ ಕ್ಷೇತ್ರಗಳಲ್ಲಿ ಬರುವ ಹರಿಜನ ಗಿರಿಜನರು ಶೇಕಡ ಹದಿನೈದರಿಂದ ಮೂವತ್ತೈದರವರೆಗೆ ಮಾತ್ರ ಇದ್ದು, ಉಳಿದ ಶೇ. 65 ರಿಂದ 85 ರವರೆಗೆ ಹರಿಜನ ಗಿರಿಜನೇತರ ಮತದಾರರಿದ್ದು ಮೀಸಲು ಸ್ಥಾನಗಳ ಬಹುಸಂಖ್ಯಾತ ಹರಿಜನ ಗಿರಿಜನ ಶಾಸಕರುಗಳು, ಹರಿಜನ ಗಿರಿಜನೇತರರ ಕೈಗೊಂಬೆಗಳಾಗಿರಲು ಸಾಧ್ಯವಾಯಿತೇ ವಿನಃ ಅವರು ತಮ್ಮ ಜನಾಂಗದ ಪ್ರತಿನಿಧಿ ಹಾಗೂ ನಾಯಕರಾಗಲು ಶಕ್ಯರಾಗಲಿಲ್ಲ. ಯೋಗ್ಯರಾಗಲಿಲ್ಲ. "ಒಕ್ಕಲಗೇರಿಯ ಜೀತಗಾರ, ಹೊಲಗೇರಿಯ ಯಜಮಾನ"ನೆಂಬ ನಾಣ್ನುಡಿ ದಿಟವಾಯಿತು. ಈ ಪದ್ಧತಿಯಲ್ಲಿ ಹರಿಜನ ಗಿರಿಜನೇತರರ ಹಸ್ತಕ್ಷೇಪವಿದ್ದು, ಆ ಜನಾಂಗದ ಏಳ್ಗಿ ಸಾಧ್ಯವಾಗಲಿಲ್ಲ. ಇಂತಹ ಮೀಸಲು ಪದ್ಧತಿಯಿಂದ ಹರಿಜನ ಗಿರಿಜನರಿಗೆ ಆಗುವ ಲಾಭಕ್ಕಿಂತಲೂ ನಷ್ಟವೇ ಅಧಿಕ. ಅವರು 1950 ರಿಂದಲೂ ಈ ನಷ್ಟವನ್ನು ಅನುಭವಿಸಿಕೊಂಡೇ ಬರುತ್ತಿದ್ದಾರೆ.

ಲೋಕಸಭಾ ಮತ್ತು ರಾಜ್ಯ ಶಾಸನ ಸಭೆಗಳಲ್ಲಿ ಹರಿಜನ ಗಿರಿಜನ ಪ್ರತಿನಿಧಿಗಳ ಇಂದಿನ ಮೀಸಲಾತಿ ಪದ್ಧತಿಯಲ್ಲಿ ಲೋಪದೋಷಗಳನ್ನು ಮನಗಂಡ ಭಾರತದ ಮಾಜೀ ಚುನಾವಣಾಧಿಕಾರಿ ಶ್ರೀ ಶಿಕ್ಧರ್‌ರವರು ಇಂದಿನ ಮೀಸಲಾತಿ ಪದ್ಧತಿಯನ್ನು ಮಾರ್ಪಡಿಸಿ ಪರ್ಯಾಯ (ಸರದಿ) ಪದ್ಧತಿಯನ್ನು ಜಾರಿಗೆ ತರಲು ಕೇಂದ್ರ ಸರ್ಕಾರಕ್ಕೂ ತಮ್ಮ ಸಲಹೆಯನ್ನು ಶಿಫಾರಸ್ಸು ಮಾಡಿರುತ್ತಾರೆ. ಶ್ರೀ. ಶಿಕ್ಧರ್‌ರವರ ಶಿಫಾರಸ್ಸು, ಸಲಹೆ ಕಾರ್ಯಗತವಾದಲ್ಲಿ ದೇಶದಹರಿಜನ ಗಿರಿಜನರಿಗೆ ಏನೊಂದು ಪ್ರಯೋಜನವೂ ದೊರಕಲು ಸಾಧ್ಯವಿಲ್ಲ. ಇದರಿಂದ ಎಲ್ಲಾ ಮೀಸಲುಕ್ಷೇತ್ರಗಳ ಹರಿಜನ ಗಿರಿಜನ ಶಾಸಕರು ಬಹುಸಂಖ್ಯಾತ ಹರಿಜನ ಗಿರಿಜನೇತರ ಸರದಿ ರೂಪದ ಕೈಗೊಂಬೆಗಳಾಗಲು ಅನುವು ಮಾಡಿಕೊಟ್ಟಂತಾಗುತ್ತದೆ ಪರ್ಯಾಯ ಮೀಸಲಾತಿ ಪದ್ಧತಿಯಿಂದ ಅಲ್ಪಸ್ವಲ್ಪ ನಾಯಕತ್ವವನ್ನು ಗಳಿಸಲು ಬಯಸುವ ಅಭ್ಯರ್ಥಿಗಳಿಗೆ ಬೇಕಾದ ಕಾಲಾವಕಾಶ ಕೆಲವಾರು ದಶಕಗಳಾದರೂ ಬೇಕು. ಇದರಿಂದ ಹರಿಜನ ಗಿರಿಜನರು ಶಾಸನ ಸಭೆಗಳಿಗೆ ತಮ್ಮ ನಿಜವಾದ ಪ್ರತಿನಿಧಿಯನ್ನು ಕಳುಹಿಸಲು ಸಾಧ್ಯವಿಲ್ಲ. ಈ ಎರಡು ಮೀಸಲಾತಿ ಪದ್ಧತಿಗಳು ಹರಿಜನ ಗಿರಿಜನರಿಗೆ ಶಾಪವಾಗುತ್ತದೆಯೇ ವಿನಹ ವರವಾಗಲು ಸಾಧ್ಯವಿಲ್ಲ. ಈ ಪದ್ಧತಿ ಹರಿಜನ ಗಿರಿಜನರಿಗೆ ಮಾತ್ರ ಶಾಪವಲ್ಲದೆ ಮೀಸಲು ಕ್ಷೇತ್ರಗಳಲ್ಲಿ ವಾಸಿಸುವ ಹರಿಜನ ಗಿರಿಜನೇತರ ಪ್ರತಿಭಾವಂತ ಸಮಾಜ ಸುಧಾರಕರಿಗೂ ಶಾಪವಾಗಿ ಪರಿಣಮಿಸಿದೆ. ಮೀಸಲು ಕ್ಷೇತ್ರಗಳಲ್ಲಿ ಹರಿಜನ ಗಿರಿಜನೇತರರು ಚುನಾವಣೆಗಳಲ್ಲಿ



ಎಂ. ಸಣ್ಣಯ್ಯ

ಪ್ರಧಾನ ಕಾರ್ಯದರ್ಶಿ,
ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ (ಐ) ಸಮಿತಿ,
ಮೈಸೂರು.

ಸ್ಪರ್ಧಿಸುವ ಅವರ ಮೂಲಭೂತ ಹಕ್ಕುಗಳನ್ನು ಮೊಟಕು ಮಾಡಿರುವುದು ರಾಜ್ಯಾಂಗಬಾಹಿರ ಪ್ರತಿನಿಧಿ ಸಭೆಯ ಮೀಸಲಾತಿಯ ಉದ್ದಿಶ್ಯ ಸಫಲವಾಗಬೇಕಿದ್ದರೆ, ಮೀಸಲಾತಿ ಪದ್ಧತಿಯ ಬದಲಿ ಅನಿವಾರ್ಯ.

ಪ್ರತಿನಿಧಿ ಸಭೆಗಳಲ್ಲಿ ದೇಶದ ಮತ್ತು ರಾಜ್ಯಗಳ ಪ್ರಜಾಸಂಖ್ಯೆಗನುಗುಣವಾಗಿ ಸ್ಥಾನಗಳನ್ನು ನಿಗಧಿ ಮಾಡಲಾಗಿದೆ. ಹರಿಜನ ಗಿರಿಜನರಿಗಾಗಿ ಮೀಸಲಾತಿ ಸ್ಥಾನಗಳನ್ನು ಅವರ ಪ್ರಜಾ ಸಂಖ್ಯೆನುಗುಣವಾಗಿ ಕಾದಿರಿಸಲಾಗಿದೆ. ಯಾರಿಗಾಗಿ ಸ್ಥಾನಗಳನ್ನು ಕಾದಿರಿಸಲಾಗಿದೆಯೋ ಅವರಿಂದಲೇ ನೂರಕ್ಕೆ ನೂರರಷ್ಟು ಅವರ ಪ್ರತಿನಿಧಿಗಳನ್ನು ಅವರೇ ಚುನಾಯಿಸುವುದರ ಮುಖೇನ ಅವರಿಗೆ ನಿಜವಾದ ಪ್ರಾತಿನಿಧ್ಯ ದೊರಕಿಸಿಕೊಟ್ಟು, ಅವರಲ್ಲೂ ನಾಯಕತ್ವ ಬೆಳೆಯಲು ಸಹಕರಿಸುವುದು ಸರ್ವವಿಧಿತ. ಈ ಪದ್ಧತಿ ಬೇರಾವ ಪದ್ಧತಿಯೂ ಅಲ್ಲದೇ ಪ್ರಜಾಪ್ರಭುತ್ವ ಪದ್ಧತಿಯಂತೆ ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜಾಪ್ರಭುತ್ವವಿರುವಂತೆ, ಹರಿಜನ ಗಿರಿಜನರಿಂದ, ಹರಿಜನ ಗಿರಿಜನರಿಗಾಗಿ ಮೀಸಲಾತಿ ಇದ್ದಂತಾಗುತ್ತದೆ. ಇದರಿಂದ ಅವರ ಸಾಮಾಜಿಕ ಮತ್ತು ಆರ್ಥಿಕಾಭಿವೃದ್ಧಿಗೆ ಅವಕಾಶವಾಗುತ್ತದೆ. ಈ ತರಹ ಪ್ರತ್ಯೇಕ ಮತದಾನದ ವ್ಯವಸ್ಥೆಯಿಂದ ಮಾತ್ರ ಮೀಸಲಾತಿ ಉದ್ದಿಶ್ಯ ಸಾರ್ಥಕ. ಇದರಿಂದ ಹರಿಜನ ಗಿರಿಜನರ ಪಿತಾಮಹ ಡಾ॥ ಬಿ. ಆರ್. ಅಂಬೇಡ್ಕರ್‌ರವರ ಕನಸು ನನಸಾಗಿ, ಹರಿಜನ ಗಿರಿಜನರೂ ಸಮಾಜದಲ್ಲಿ ಸರಿಸಮಾನರಾಗಿ ತಲೆ ಎತ್ತಿ ಬಾಳಲು ಸಾಧ್ಯ. ಇವರ ಸಾಮಾಜಿಕ ಮತ್ತು ಆರ್ಥಿಕಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ಇತರರ ಹಸ್ತಕ್ಷೇಪ ನಿಲ್ಲುತ್ತದೆ. ಈ ಬದಲೀ ವ್ಯವಸ್ಥೆಯಿಂದ ಹರಿಜನ ಗಿರಿಜನರು ತಮ್ಮ ಕಾಲ ಮೇಲೆ ತಾವೇ ನಿಂತು ಸಮಾಜದ ಎಲ್ಲಾ ಕೋಮಿನ ಜನರೊಡನೆ ಸರಿಸಮಾನತೆಯಿಂದ ಬಾಳಿ, ತಾವೆಲ್ಲರೂ ಭಾರತೀಯರೆಂಬ ಭಾವನೆ ಉದ್ಭವಿಸುತ್ತದೆ.

ಈ ಬದಲೀ ವ್ಯವಸ್ಥೆ ರಾಷ್ಟ್ರೀಯ ಸಾಮಾಜಿಕ ಪಿಡುಗಾದ ಅಸ್ಪೃಶ್ಯತೆ ಸಮಾಜದಲ್ಲಿ ಇರುವವರೆಗೆ ಮಾತ್ರ ಮುಂದುವರಿಯಬೇಕೆ ವಿನಹ, ಎಲ್ಲಾ ಕಾಲಕ್ಕೂ ಅನ್ವಯಿಸ ತಕ್ಕದ್ದಲ್ಲ. ಇಂದು ಪ್ರತ್ಯೇಕ ಮತದಾನ ಬಯಸುವ ಹರಿಜನ ಗಿರಿಜನರು ಮುಂದೆ ಪ್ರತ್ಯೇಕ ರಾಷ್ಟ್ರಾಪೇಕ್ಷಿಗಳಾ ಬಯಸೀರೆಂಬ ಭಯ, ಅನುಮಾನ, ಸಂಶಯಗಳು ಹರಿಜನ ಗಿರಿಜನೇತರರಿಗೆಸಲ್ಲ, ಹರಿಜನ ಗಿರಿಜನರಿಗೆ ಪ್ರತ್ಯೇಕ ಮತದಾನ ಪದ್ಧತಿಯನ್ನು ವಿರೋಧಿಸುವ ಹರಿಜನ ಗಿರಿಜನೇತರರು ಸ್ವಾರ್ಥಪರರೇ ವಿನಹ ರಾಷ್ಟ್ರಾಭಿಮಾನಿಗಳಲ್ಲ.

ಹರಿಜನ ಗಿರಿಜನರ ಪ್ರತ್ಯೇಕ ಮತದಾನ ಮೀಸಲಾತಿ ಪದ್ಧತಿಯ ಸಕಾರಣಗಳನ್ನು ದೇಶದ ಯಾವ ರಾಜಕೀಯ ಪಕ್ಷ ಕೈಗೆತ್ತಿಕೊಂಡು ಅವರ ಬೇಡಿಕೆಗಳನ್ನು ಈಡೇರಿಸುವ ಕಾರ್ಯದಲ್ಲಿ ಮುಂದೆ ಬರುತ್ತದೆಯೋ ಆ ಪಕ್ಷಕ್ಕೆ ಹರಿಜನ ಗಿರಿಜನರ ಪೂರ್ಣ ಬೆಂಬಲ ದೊರಕುವುದರಲ್ಲಿ ಯಾವ ರಾಜಕೀಯ ಪಕ್ಷವೂ ಸಂಶಯ ಪಡಬೇಕಾಗಿಲ್ಲ.

ರಾಷ್ಟ್ರಾಭಿಮಾನಿಗಳು ಮತ್ತು ರಾಜಕೀಯ ಪಕ್ಷಗಳು ಹರಿಜನ ಗಿರಿಜನರ ಪ್ರತ್ಯೇಕ ಮತದಾನ ಮೀಸಲಾತಿ ಪದ್ಧತಿ ಬೇಡಿಕೆಯನ್ನು ಈಡೇರಿಸಲು ಮುಂದೆ ಬಾರದಿದ್ದಲ್ಲಿ ಹರಿಜನ ಗಿರಿಜನರೇ ಸಂಘಟಿತರಾಗಿ ತಮ್ಮ ಹಕ್ಕು ಬಾಧ್ಯತೆಗಳ ಹಾಗೂ ರಕ್ಷಣೆಗಳನ್ನು ತಾವೇ ನೋಡಿಕೊಳ್ಳಬೇಕಾಗುತ್ತದೆ. ಇದಕ್ಕಾಗಿ ಅವರಿಗಾಗಿ ಉಳಿದಿರುವ ಒಂದೇ ಒಂದು ಮಾರ್ಗವೆಂದರೆ ಸಾಮೂಹಿಕ ಮತಾಂತರ.

ಅಂಬೇಡ್ಕರ್

ನಮ್ಮ ನಡುವಣ ಕಟ್ಟಕಡೆಯುವನ
ಒಡಲಿನಾಳದ ಬೆಂಕಿ-ಬೇರುಗಳ
ತಳ ಹುಡುಕಿ ಹೊರಟವನೆ,
ಅರಿವಿನಡವಿಯ ಹಿರಿಯ
ಗುರು ನೀನು ಅಂಬೇಡ್ಕರ್–

ಮನುಕುಲದ ಅಪಮಾನದ ಆಳದಲ್ಲಿ
ನಿರಂತರ ಮೊಳೆಯುಲೆಳೆಸುವ ಸ್ವಾಭಿಮಾನಕ್ಕೆ,
ಅದು ಹೆಮ್ಮರವಾಗಿ ನಿಲ್ಲುವ ಊರಲುಸಾಬರಿಗೆ;
ಸುತ್ತಲೆಲ್ಲೆಡೆ ಹಬ್ಬಲೆಳೆಸುವ ಪ್ರೀತಿಗೆ
ನೇರ ನಡೆ ನಿರ್ಭೀತಿಗೆ,
ಜನ್ಮಾರಭ್ಯ ಟೊಂಕ ಕಟ್ಟಿದ ಧೀರನೆ–

ಈಗಲೂ
ಹಾಡಹಗಲಿನ ಎಲ್ಲ
ಕೊಲೆ ಸುಲಿಗೆ ಹಲ್ಲೆ ಸಂಕೋಲೆಗಳ ನಡುವೆ
ನರಳಿ
ನಿಟ್ಟುಸಿರೆಳೆವ ದಲಿತ ಪಡೆ–ಜೀವನಡೆ
ಕಟ್ಟೊಡೆಯಲಾರದ ಹೆಣ್ಣು–ಬದುಕಿನಕ್ಕರೆ
ಗಣ್ಣು

ಇಲ್ಲಿ ಚಲಿಸಲೆ ಇಲ್ಲ:
ಜಡತೆಯೆ ಎಲ್ಲ ಆಗಿರುವಾಗ
ಹೀಗೇ–

ಹಾಡಲಾಗದ ದನಿಯು
ನನ್ನ ಅರೆಬರೆಗಿವುದು ಈ
ಮೂಕನೋಟಕ ನಿಸ್ಸಹಾಯಕ ನಿಲುವಿಗೆ
ಉಂಟೆ ಕ್ಷಮೆ ಬಲ ಭೀಮನೆ ?

—ಕಾಳೇಗೌಡ ನಾಗವಾರ

ಸರ್ಕಾರ ದಲಿತರ ಕ್ಷಮೆ ಕೇಳಲಿ

ಹರಿಜನ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಎಂಜಿನಿಯರ್ ಮಲ್ಲಿಕಾರ್ಜುನಯ್ಯನವರ ಮೇಲೆ ಕಾಡು ಸಚಿವ ಮಾದೇಗೌಡ ಕೈಮಾಡಿದ ಪ್ರಕರಣದ ಬಗ್ಗೆ ಕಾನೂನು ರೀತ್ಯಾ ಕ್ರಮಕ್ಕೈಗೊಳ್ಳುವ ಅಧಿಕಾರ ಯಾರಿಗೆ ಇದೆ?

ಮಂಡ್ಯ ಜಿಲ್ಲಾ ಕಾಂಗ್ರೆ ಸಮಿತಿ ಅಧ್ಯಕ್ಷ ಕೆ.ಎಸ್ ನಾಗೇಗೌಡ ಸಿ.ಒ.ಡಿ. ತನಿಖೆಗೆ ಒತ್ತಾಯ ಪಡಿಸಿದ್ದರೆ, ಜಿಲ್ಲಾ ಯುವ ಕಾಂಗ್ರೆ ಸಮಿತಿ ಅಧ್ಯಕ್ಷ ಎನ್. ನಂಜಯ್ಯ ಕಾಡು ಸಚಿವರನ್ನು ಸಮರ್ಥಿಸಿ, ಮುಖ್ಯ ಮಂತ್ರಿಯವರಿಗೆ ಪತ್ರ ಬರೆದು, ಜಿಲ್ಲೆಯ ಹರಿಜನರು, ಮಾದೇಗೌಡರಲ್ಲಿ ವಿಶ್ವಾಸವನ್ನು ಹೊಂದಿದ್ದಾರೆ ಎಂದು ತಿಳಿಸಿದ್ದಾರೆ.

ಹರಿಜನರ ಪರವಾಗಿ ಈ ಹೇಳಿಕೆ ನೀಡಲು ಅವರಿಗೆ ಅಧಿಕಾರ ಕೊಟ್ಟವರಾರು? ಹರಿಜನರು ಮಾದೇಗೌಡರಲ್ಲಿ ಇಟ್ಟಿರುವ ವಿಶ್ವಾಸವನ್ನು ತೋರಿಸುವುದು ಹೇಗೆ.

ಈ ಮಧ್ಯೆ ಕಾಂಗ್ರೆ ಶಾಸಕ ರಾಜಗೋಪಾಲ ಮದ್ದೂರಿನ ಸುತ್ತಮುತ್ತಲೂ ಪ್ರವಾಸ ಮಾಡಿ ಆರೋಪ ನಿಜವೆಂತಲೂ ಕಾಡು ಸಚಿವ ಮಾದೇಗೌಡರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಮುಖ್ಯ ಮಂತ್ರಿಯವರಿಗೆ ಪತ್ರ ಬರೆದಿದ್ದಾರೆ. ಜಿಲ್ಲಾ ದಲಿತ ಸಂಘರ್ಷ ಸಮಿತಿ ನ್ಯಾಯಕ್ಕಾಗಿ ಹೋರಾಟ ನಡೆಸುವುದಾಗಿ ತಿಳಿಸಿದೆ.

ಕಾಂಗ್ರೆ ಆಡಳಿತ ಇರುವ ಈ ದೇಶದಲ್ಲಿ ಹರಿಜನ–ಗಿರಿಜನ–ದಲಿತರು–ಹಿಂದುಳಿದ ವರ್ಗಗಳ ಮೇಲೆ ನಿರಂತರ ಹಲ್ಲೆ ದೌರ್ಜನ್ಯ, ಕೊಲೆ–ಸುಲಿಗೆಗಳು ನಡೆಯುತ್ತಿರುವುದು ಸರ್ವೇ ಸಾಮಾನ್ಯ.

ಕೆಲವು ದಿನಗಳ ಹಿಂದೆ ಕಾಂಗ್ರೆ ಶಾಸಕ ಶಿರ್ನಾಳ್ಳಿ ಚಂದ್ರಶೇಖರ್, ಚುನಾಯಿತ ಪಂಚಾಯಿತಿ ಸದಸ್ಯನಾದ ಹರಿಜನನೊಬ್ಬನಿಂದ ಪಾದ ರಕ್ಷೆಯನ್ನು ಹೊಲಿಸಿದ ಘಟನೆ ಬೆಳಕಿಗೆ ಬರುವ ಸಂಗತಿಗಳಾದರೆ ಬೆಳಕಿಗೆ ಬಾರದ ಘಟನೆಗಳು ದಿನ ನಿತ್ಯ ನಡೆಯುತ್ತಲೇ ಇವೆ. ಅಧಿಕಾರದಲ್ಲಿರುವ ಚುನಾಯಿತ ಜನ ಸೇವಕರು ದಲಿತೋದ್ಧಾರ ಮಂತ್ರವನ್ನು ಬಾಯಲ್ಲಿ ಜಪಿಸಿ, ಹೇಗೆ ದಲಿತರನ್ನು ಧಮನ ಮಾಡುವರೆಂಬ ಸಂಗತಿ ಮೇಲಿನ ಘಟನೆಗಳಿಂದ ತಿಳಿಯುತ್ತದೆ.

ದಲಿತರ ಬಗ್ಗೆ ಅಧಿಕಾರ ರೂಢ ಸರ್ಕಾರಕ್ಕೆ ನಿಜಕ್ಕು ಕಳಕಳಿ ಇದ್ದರೆ ಹರಿಜನ ಎಂಜಿನಿಯರ್‌ರವರ ಕ್ಷಮೆ ಯಾಚಿಸಲಿ ಅಥವಾ ಕೈಮಾಡಿದ ಕಾಡು ಸಚಿವ ಮಾದೇಗೌಡರ ಮೇಲೆ ಮುಖ್ಯ ಮಂತ್ರಿಯವರು ಕ್ರಮ ಕೈಗೊಳ್ಳಲಿ.

—ಅ. ಶಾಮಣ್ಣ, ಗಾಂಧಿನಗರ

ಮಹಾರಾಷ್ಟ್ರದಲ್ಲಿ ರಾಮು–ರಾವಣ ಬಿರುಗಾಳಿ

(ಒಂದನೇ ಪುಟದಿಂದ)

ಒಬ್ಬ ಐತಿಹಾಸಿಕವಾಗಿ, ಬೌದ್ಧ ಧರ್ಮಕ್ಕೆ ಸೇರಿದ ಜನಪ್ರಿಯ ಆಡಳಿತಗಾರನಾಗಿ ವರ್ಣಿಸಲ್ಪಟ್ಟಿದ್ದಾನೆ. ಕಾಂಬ್ಳೆಯವರ ಪ್ರಕಾರ ಈ ರಾವಣ 'ರಾಮಾಯಣ'ದ ರಾವಣನೇ ಎಂಬುದಕ್ಕೆ ಸಾಕಷ್ಟು ಪುರಾವೆಗಳಿವೆ. ರಾಮ ನಿಜಕ್ಕೂ ಕಾಂಬ್ಳೆ ಹೇಳುವಂತೆ–ಜಯಶಾಲಿಗಳಾದ ಆರ್ಯನ್ನರಿಗೆ ಮಾತ್ರ ನಾಯಕನೇ ಹೊರತು ಪರಾಭವಗೊಂಡ ಆರ್ಯೇತರ ಜನಾಂಗಕ್ಕಲ್ಲ

ಎಲ್ಲ ಉದ್ರಿಕ್ತ ಸ್ಥಿತಿಗಳಿಗೂ ಕಾರಣವಾದ ಮತ್ತು ಕೃತಿಯಲ್ಲಿಟ್ಟ ದ್ವಿತೀಯ ಹಾಗೂ ಪ್ರಮುಖವಾದ ವಾದವೆಂದರೆ ಸೀತೆ ರಾವಣನಿಂದ ಅಪಹರಣಗೊಂಡಿರುವುದು ಸಾಧ್ಯವಿಲ್ಲವೆಂದು. ಒಂದೋ ರಾವಣ ಅಂದಿನ ಮಾಮೂಲಿ ಸಂಪ್ರದಾಯದಂತೆ ನ್ಯಾಯಯುತವಾದ ಹೋರಾಟದ ಮೂಲಕ ಸೀತೆಯನ್ನು ಕರೆದುಕೊಂಡು ಹೋಗಿರಬೇಕು ಅಥವಾ ಸೀತೆಯೇ ರಾವಣನಲ್ಲಿ ಆಕರ್ಷಿತಳಾಗಿ, ಅವನ ಹಿಂದೆ ಸ್ವಇಚ್ಛೆಯಿಂದಲೇ ಹೋಗಿರಬೇಕು. ಇದೂ ಕೂಡ ರಾಮಾಯಣದ ಮೇಲೆ ಪ್ರಭುತ್ವ ಸಾಧಿಸಿದ ವ್ಯಕ್ತಿಗಳಿಂದ ಮತ್ತು ರಾಮಯಣದಲ್ಲಿಯೇ ಬೇರೆ ಬೇರೆ ವಾದಗಳ ಮೂಲಕ ಬೆಂಬಲಿತವಾಗಿದೆ. ಕಾಂಬ್ಳೆಯವರ ಟೀಕೆಗೆ ಗುರಿಯಾಗುತ್ತಿರುವುದು : ಈ ವಾದದ ಮೂಲಕ ಸೀತೆಯನ್ನು ಅವಮಾನಿಸುತ್ತಿದ್ದಾರೆ ಎಂಬದಕ್ಕೆ ಕಾಂಬ್ಳೆ ಪ್ರತಿಕ್ರಿಯೆ : "ರಾಮಾಯಣದಲ್ಲೇ ಉಲ್ಲೇಖಿತವಾಗಿರುವಂತೆ ರಾಮನಿಗೆ ಅನೇಕ ಮಹಿಳೆಯರಿದ್ದರು; ನಾನು ಕೇಳುವುದಿಷ್ಟು : ಒಬ್ಬ ಮಹಿಳೆಗೆ ಮದುವೆಯ ನಂತರ ಮತ್ತೊಬ್ಬ ಪುರುಷನನ್ನು ಪ್ರೀತಿಸುವ ಹಕ್ಕಿದೆಯೇ?"

ಪೊದಾರ್ ಕಾಲೇಜಿನ ಪ್ರೊ॥ ವ್ಯಾಸ್ ಅವರು ಕಾಂಬ್ಳೆಯವರ ಲೇಖನದ ಪ್ರತಿಯೊಂದು ಅಂಶಕ್ಕೂ ಕೊಟ್ಟ ಪ್ರತ್ಯುತ್ತರವನ್ನು ನವಶಕ್ತಿಯು ಪ್ರಕಟಿಸಿತು. ಥಟ್ಟೆಯ ಬೆದರಿಕೆ ಮತ್ತು ಕೀರ್ತನಕಾರನ ಪತ್ರಿಕಾಗೋಷ್ಠಿಯ ತರುವಾಯದಲ್ಲೇ ಬೆಹರೆಯವರು ವಿವಾದಾಸ್ಪದ "ವಿಷಯಗಳನ್ನು ಪ್ರಕಟಿಸುವ ಹಕ್ಕಿನ ಬಗ್ಗೆ ಸಂಪಾದಕೀಯ ಬರೆದು "ಯಾರೆಲ್ಲ ರಾಮಾಯಣವನ್ನು ಓದಿದ್ದಾರೋ ಅವರು ಅದರ ಮೇಲಿನ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು —ಆಧಾರಗಳ ಹಿನ್ನೆಲೆಯಲ್ಲಿ—ಹಕ್ಕುಂಟು" ಎಂದಿದ್ದಾರೆ. "ನನಗೆ ರಾಮನ ಬಗ್ಗೆ ಎಲ್ಲ ಭಕ್ತಿಯೂ ಇದೆ, ಆದರೆ ನನಗೆ ಚರ್ಚೆಗೆ ಅವಕಾಶಕೊಡುವ ಹಿಂದೂ ಪರಂಪರೆಯ ಬಗೆಗೂ ನಂಬಿಕೆಯಿದೆ. ಇಂಥ ಅಸಹನೆ ಅಂತಿಮವಾಗಿ ಹಿಂದೂ ಧರ್ಮವನ್ನು ನಾಶಮಾಡಬಲ್ಲದು." ಕಾಂಬ್ಳೆಯವರ ಲೇಖನ ಸೀತೆಯನ್ನು ದೂಷಿಸುವ ಪ್ರಯತ್ನವಾಗಿದ್ದರೆ ಅಥವಾ ಅರ್ಥವಿಲ್ಲದ ವಿವಾದವನ್ನು ಎಬ್ಬಿಸುವುದಾಗಿದ್ದರೆ ತಾನು ಪ್ರಕಟಿಸುತ್ತಿರಲಿಲ್ಲ ಎಂಬ ಅಂಶವನ್ನು ಬೆಹರೆ ಕಾಪಾಡಿಕೊಂಡಿದ್ದಾರೆ. "ಆದರೆ ಕಾಂಬ್ಳೆಯವರು ತಮ್ಮ ಲೇಖನದಲ್ಲಿ ವಿಷಯವನ್ನು ಗಂಭೀರವಾಗಿ ಚರ್ಚಿಸಿದ್ದಾರೆ. ಇದರಲ್ಲಿ ಬೇರೆ ದೃಷ್ಟಿಕೋನವುಳ್ಳವರು ಕಾಂಬ್ಳೆಯವರಿಗೆ ಗಂಭೀರವಾಗಿ ಪ್ರತಿಕ್ರಿಯಿಸುವುದನ್ನು ಸವಾಲಾಗಿ ಸ್ವೀಕರಿಸಬೇಕು."

—ಜ್ಯೋತಿ ಪುನ್ವಾನಿ
"ದಿ ಸಂಡೇ ಅಬ್‌ಸರ್ವರ್"

ಭೂಮಿಗಾಗಿ ಅರ್ಜಿ: ದಲಿತರು ಮಾಡಿದ ಮಹಾಪಾರಾಧ!

ದಿನಾಂಕ 16-8-82 ರ ಸಂಜೆ ಸುಮಾರು 4 ಗಂಟೆಯ ಸಮಯಕ್ಕೆ ಸೋಮವಾರ ಪೇಟೆಗೆ ಸಮೀಪದ 7ಕಿ.ಮೀ. ಅಂತರ ಹೊಂದಿರುವ ಹಿರಿಕಾರ ಗ್ರಾಮದ ದಲಿತ ಕೆಂಚಯ್ಯ ಮತ್ತು ಮೊಗಪ್ಪ ಹೆಚ್. ಇವರುಗಳು ಊರಿನಿಂದ ಪೇಟೆಗೆ ಸಂತೆ ಸಾಮಾನು ಕೊಳ್ಳಲು ಬರುತ್ತಿರುವಾಗ ಅದೇ ಗ್ರಾಮದ ಎರಡು ಜನ ಸವರ್ಣೀಯ ದುಷ್ಕರ್ಮಿಗಳು ದಾರಿಯಲ್ಲಿ ಅಡ್ಡಗಟ್ಟಿ ವಿನಾ ಕಾರಣ ತಮ್ಮ ಕೈಲಿದ್ದ ಕೊಡೆಯಿಂದ ಥಳಿಸಿದರು. ಏಟುತಿಂದ ದಲಿತ ಕೆಂಚಯ್ಯ ಮತ್ತು ಮೊಗಪ್ಪ ಎಂಬುವರು ಕೂಡಲೆ ಸೋಮವಾರಪೇಟೆ ಪೊಲಿಸರಿಗೆ ಪುಕಾರು ಕೊಡಲು ಹೋದರು. ಪುಕಾರು ಕೊಟ್ಟು ಬರುವ ಸ್ಥಳದಲ್ಲಿ ಗಂಟೆ ಸುಮಾರು ರಾತ್ರಿ ಎಂಟಾಗಿತ್ತು. ಕತ್ತಲಾದ ಕಾರಣ ವಾಹನದ ಅನಾನುಕೂಲತೆ ಯಿಂದ ಪೋಲಿಸರು ಬೆಳಿಗ್ಗೆ ಬರುವುದಾಗಿ ಹೇಳಿದರು.

ಮರಳಿ ಊರಿಗೆ ದಾವಿಸುತ್ತಿದ್ದ ದಲಿತ ಕೆಂಚಯ್ಯ ಮತ್ತು ಮೊಗಪ್ಪ ಎಂಬುವರ ಮೇಲೆ ಅದೇ ಗ್ರಾಮದ ಸವರ್ಣೀಯರೆನ್ನಲಾದ ಚೆನ್ನಪ್ಪ ಚಂದ್ರಪ್ಪ, ರಾಜಪ್ಪ, ನಾರಾಯಣ, ಸೋಮಪ್ಪ ಎಂಬುವರು ದೊಣ್ಣೆ, ಕಲ್ಲು, ಕೋವಿ (ಬಂಧೂಕ) ಕಬ್ಬಿಣದ ರಾಡು ಇತ್ಯಾದಿ ಮಾರಕ ವಸ್ತುಗಳಿಂದ ತೀವ್ರಹಲ್ಲೆ ನಡೆಸಿದರು. ಈ ಹಲ್ಲೆಯಲ್ಲಿ ಮೊಗಪ್ಪ ಎಂಬುವನು ಚಿಕ್ಕ ಪುಟ್ಟ ಗಾಯಗಳೊಂದಿಗೆ ಪಾರಾಗಿ ಊರಿನತ್ತ ಓಡಿದನು. ಆದರೆ ಕೆಂಚಯ್ಯನ ಸ್ಥಿತಿ ಎಡಕೈ ಮುರಿದು ತಲೆಗೆ ಪೆಟ್ಟುಬಿದ್ದು ಸಾದಾರಣ ಹತ್ತು ಹನ್ನೆರಡು ತೂತುಗಳಾಗಿರು



(ಭೂಮಿಗೆ ಅರ್ಜಿಹಾಕಿದ ಕೆಂಚಯ್ಯನ ಸ್ಥಿತಿ)

ತ್ತದೆ. ಅಲ್ಲದೆ ಕಾಲುಕೈಗಳನ್ನು ಕಬ್ಬಿಣದ ರಾಡು, ಕಲ್ಲುಗಳಿಂದ ತೀವ್ರವಾಗಿ ಗೆಜ್ಜಿರುತ್ತಾರೆ ಅಪಾಯ ದಿಂದ ಪಾರಾದ ದಲಿತ ಮೊಗಪ್ಪ ಎಂಬುವನು ಊರಿನ ಎಲ್ಲಾ ದಲಿತರಿಗೆ ವಿಷಯ ತಿಳಿಸಿ ಕರೆದು ಕೊಂಡು ಬರುವಷ್ಟರಲ್ಲಿ ದುಷ್ಕರ್ಮಿಗಳು ಕೆಂಚಯ್ಯ ಸತ್ತಿರಬಹುದೆಂದು ಸ್ಥಳದಿಂದ ನಾಪತ್ತೆಯಾಗಿದ್ದರು. ದೀಪಗಳಿಂದ ಹಲ್ಲೆ ನಡೆದ ಸ್ಥಳದಲ್ಲಿ ಕೆಂಚಯ್ಯನನ್ನು ನೋಡಿದರೆ ಕಾಣಿಸಲಿಲ್ಲ. ರಕ್ತ ಮಾತ್ರ ರಸ್ತೆಯ ಬೊಡ್ರಸ್. ಕಲ್ಲುಗಳ ಮೇಲೆ ಚೆಲ್ಲಾಡಿತ್ತು. ರಕ್ತವನ್ನೆ ಹಿಂಬಾಲಿಸಿ ಹುಡುಕಿದಾಗ ಕೆಂಚಯ್ಯ ಪಕ್ಕದ ಬಡ ಕುಂಬಾರನ ಸೂರಿನಡಿ ಪ್ರಜ್ಞಾಹೀನ ನಾಗಿ ಬಿದ್ದಿದ್ದನು. ಕೂಡಲೆ ಸೋಮವಾರಪೇಟೆ ಪೋಲಿಸ್‌ಗೆ ತಿಳಿಸಿ ಪೋಲಿಸನವರು ಸೋಮವಾರ ಪೇಟೆ ಆಸ್ಪತ್ರೆಗೆ ಕೆಂಚಯನನ್ನು ದಾಖಲು ಮಾಡಿ ದರು. ಪೋಲಿಸ್‌ನವರು ಮೇಲ್ಕಂಡ ಹಲ್ಲೆ ನಡೆಸಿದ ಆಪಾದಿತರ ಮೇಲೆ ಮೊಕದ್ದಮೆ ದಾಖಲು ಮಾಡಿ ಐವರನ್ನು ಬಂದಿಸಿ ಕ್ರಮ ತೆಗೆದುಕೊಂಡರು. ಈ ಹಲ್ಲೆಗೆ ಕಾರಣ ಹರಿಕಾರ ಗ್ರಾಮದಲ್ಲಿ ಸಾದರಣ 20 ಒಕ್ಕಲು ದಲಿತ ಕುಂಟುಂಬಗಳಿದ್ದು ದಲಿತರಿಗೆ ಯಾವುದೇ ಆಸ್ತಿಗಳಿರುವುದಿಲ್ಲ. ಊರಿನ ನೂರಾರು ಏಕರೆ ಪೈಸಾರಿ ಜಾಗವನ್ನು ಸವರ್ಣೀಯರು ಆಕ್ರಮಿಸಿಕೊಂಡು ಕಾಫಿ ತೋಟಗಳನ್ನು ಮಾಡಿ ರುತ್ತಾರೆ. ಆದ್ದರಿಂದ ಊರಿಗೆ ಮೀಸಲಾದ ಉರುಡುವೆ (ಗೋಮಾಳ) ಜಾಗಕ್ಕೆ ದಲಿತರು ಅರ್ಜಿ ಹಾಕಿದಾಗ ಸರಕಾರವು ದಲಿತರಿಗೆ ಹತ್ತೊಂಬತ್ತು ಕುಟುಂಬಗಳಿಗೆ ತಲಾ ಎರಡು ಏಕರೆಯಂತೆ ಮಂಜೂರು ಮಾಡಿತು. ಇದನ್ನು ಸಹಿಸದ ಸವರ್ಣೀಯರು ದಲಿತರ ಮೇಲೆ ಮಂಜೂರಾಗಿರುವ ಜಾಗವನ್ನು ನಮಗೆ ಅರ್ಧಬಿಟ್ಟುಕೊಡಿ ಎಂದು ಕೇಳಿದರು. ಇದಕ್ಕೆ ಒಪ್ಪದ ದಲಿತರ ಮೇಲೆ ಕೋಪಗೊಂಡು ದಲಿತರನ್ನು ಬಹಿಷ್ಕರಿಸಿ ಅಂದಿನಿಂದ ಚಿಕ್ಕ ಪುಟ್ಟ ಕಿರುಕುಳಗಳನ್ನು ಕೊಡತೊಡಗಿದ್ದರು.

—ಹೆಚ್. ಡಿ. ಗುರುಲಿಂಗಪ್ಪ

ನೀರು ಯಾರ ಸ್ವತ್ತು?

ನಂಜನಗೂಡು ತಾಲ್ಲೂಕು ಕೂಡ್ಲಾಪುರದ ದಲಿತರ ಬಾವಿಗೆ ಅದೇ ಊರಿನ ಮೇಲ್ಜನರು ಕಸ ಕಡ್ಡಿ, ಕಳ್ಳಿ, ಸಗಣಿ ಇತ್ಯಾದಿಗಳನ್ನು ತುಂಬಿದ್ದರು ನನ್ನ ಹತ್ತಿರ ದೂರು ಬಂತು, ಕೂಡ್ಲಾಪುರದ ಯುವಕನೊಬ್ಬ ನನ್ನ ಹತ್ತಿರ ಬಂದಿದ್ದ. ನಾವು ಮಾತಾಡಿದ್ದು ಇಲ್ಲಿದೆ

"ನಮ್ಮ ಜನಗಳದೇ ತಪ್ಪು ಸಾರ್" ಎಂದ.

"ಹೌದಾ? ಅದೇನು ತಪ್ಪು?" ಪ್ರಶ್ನಿಸಿದೆ

"ಮೇಲ್ಜಾತಿಯೋರ ಬೋರ್‌ವೆಲ್‌ನಲ್ಲಿ ನೀರು ತಕಂಡಿದ್ದು ತಪ್ಪಲ್ವ'?

"ಆ ನೀರನ್ನ ಮೇಲ್ಜಾತಿಯವರು ರಿಜಿಸ್ಟರ್ ಮಾಡಿಸ್ಕಂಡಿದ್ರಾ"? ಪ್ರಶ್ನಿಸಿದೆ.

ಪ್ರಶ್ನೆ ಅರ್ಥವಾಗದ ಆತ ಕಣ್ಣು ಬಾಯಿ ಬಿಡುತ್ತಾ ಬೆರಗು ಬಡಿದವನಂತೆ :

"ಇದೇನ್ಸಾರ್ ಯಿಂಗಂತೀರಿ?" ತಣ್ಣಗೆ ಪ್ರಶ್ನಿಸಿದ.

"ಹೌದ್ರಿ ನೀರು ಗಾಳಿ ಬೆಳಕು ಯಾರಪ್ಪನ ಆಸ್ತೀನು ಅಲ್ಲ. ಅದೆಲ್ಲ ಎಲ್ಲರಿಗೂ ಸಲ್ಲಬೇಕಾದ್ದು. ಅಲ್ಲಿ ನೀರ್ತ ಕಂಡ್ರೆ ತಪ್ಪೇನಿದೆ"? ಎಂದೆ. ಅವನು ಮೌನವಾಗಿದ್ದ

"ಹೋಗ್ಲಿ ನಿಂಬಾವಿಗೆ ಕಸ ಹಾಕ ಬೇಕಾದ್ರೆ ಮತ್ತೇನಾದ್ರು ಕಾರಣ ಇತ್ತಾ"?

"ಅಂಥದೇನು ಇಲ್ಲ ಸಾರ್"

"ನಿಮ್ಮ ಬಾವೀನ ಅವ್ರು ಹಾಳು ಮಾಡಿದ್ದಾರೆ ನೀವು ಅವರ ಬಾವಿ ನೀರನ್ಯಾಕೆ ಉಪಯೋಗಿಸಬಾರದು"?

ಆತ ಬೆದರಿದ. ಕಂಗಾಲಾದವನಂತೆ ಕಂಡ. ಮತ್ತೆ ಮುಂದುವರಿದು ನುಡಿದ : ನಾವು ಬೋರ್ ಬಾವಿಗೆ ವೋದಾಗಲೆ ಅವ್ರು ಅಲ್ಲಿ ನೀರು ತಕ್ಕಳೋದು ನಿಲ್ಸಿದ್ರು. ಇನ್ನು ಅವರು ಕಟ್ಟಿರ ಬಾವಿಗೆ ವೋಗಕಾಗ್ತದ?

"ಯಾಕೋಗಬಾರದು"?

ಆತ ಉತ್ತರಿಸಲಿಲ್ಲ.

"ಬಾವಿ ಅವರು ಕಟ್ಟಿರಬಹುದು ಅದಕ್ಕಾಗಿ ಬಾವಿ ಅವರದಾಗಬಹುದು. ಆದರೆ ಅದರೊಳಗಿರೊ ನೀರು ಅವರದಲ್ಲ. ಯಾರು ಬೇಕಾದ್ರು ಕುಡೀಬಹುದಲ್ವ?"

ಆತ "ಹೌದು" ಎಂದ.

ಆದರವನಿಗೆ ತೃಪ್ತಿಯಾದಂತೆ ಕಾಣಿಸಲಿಲ್ಲ. ನಾನು ನಿಷ್ಕ್ರಿಯ ಪೋಲೀಸರು ಮತ್ತು ಅಸ್ಪೃಶ್ಯತೆಯ ಬಗ್ಗೆ ಯೋಚಿಸುತ್ತಿದ್ದೆ.

—ಮುಳ್ಳೂರು ನಾಗರಾಜ್

ಸಂಪಾದಕ : ರಾಮದೇವರಾಕೆ, ಪ್ರಕಾಶಕ : ಹೆಚ್. ಗೋವಿಂದಯ್ಯ, ವಿನಯ ಪ್ರಿಂಟರಿ, 2514-ಎ, ಕೆ. ಜಿ. ಕೊಪ್ಪಲು, ಮೈಸೂರು-14